# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಮಂಗಳವಾರ, ಅಕ್ಟೋಬರ್ 19, 2021

ಸಂಪುಟ : 48 ಸಂಚಿಕೆ : 158 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com




## ದೀಪಾವಳಿ ಸಡಗರಕೆ ಬಗೆ-ಬಗೆಯ ಹಣತೆ..!

ನಾಡಹಬ್ಬ ದಸರಾ ಸಂಭ್ರಮ ಇನ್ನೂ ಮಾಸುವ ಮುನ್ನವೇ, ಬೆಳಕಿನ ಹಬ್ಬ ದೀಪಾವಳಿ ಸಡಗರದ ಆಚರಣೆಗೆ ದಿನಗಣನೆ ಆರಂಭವಾಗಿದೆ. ಹೀಗಾಗಿ ಹಬ್ಬಕ್ಕೆ ಬೇಕಾದ ಬಗೆ-ಬಗೆಯ ಮಣ್ಣಿನ ಹಣತೆಗಳ ತಯಾರಿಕೆಯಲ್ಲಿ ತೊಡಗಿರುವ ದಾವಣಗೆರೆಯ ಕುಂಬಾರ ಸಮಾಜದ ಕುಟುಂಬ.

# 25ರಿಂದ 1-5ನೇ ತರಗತಿ ಆರಂಭ

## ಸದ್ಯಕ್ಕೆ ಎಲ್‌ಕೆಜಿ, ಯುಕೆಜಿ ಶಾಲೆಗಳ ಆರಂಭವಿಲ್ಲ : ಮುಖ್ಯಮಂತ್ರಿ

ಬೆಂಗಳೂರು, ಅ. 18 – ಬರುವ ಅಕ್ಟೋಬರ್ 25 ರಿಂದ ಒಂದರಿಂದ ಐದನೇ ತರಗತಿವರೆಗಿನ ಶಾಲೆಗಳನ್ನು ಆರಂಭಿಸಲು ಸರ್ಕಾರ ತೀರ್ಮಾನಿಸಿದೆ.

ಆದರೆ, ಎಲ್‌ಕೆಜಿ ಮತ್ತು ಯುಕೆಜಿ ಶಾಲೆಗಳನ್ನು ಸದ್ಯಕ್ಕೆ ತೆರೆಯುವಂತಿಲ್ಲ.

ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ತಜ್ಞರು ಮತ್ತು ಪರಿಣಿತರ ಸಲಹೆಯಂತೆ ಪ್ರಾಥಮಿಕ ಹಂತದ ಶಾಲೆಗಳನ್ನು ಆರಂಭಿಸುವ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ.

ತರಗತಿ ಕೊಠಡಿ ಶೇ. 50 ರಷ್ಟು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿದ್ದು, 50 ವರ್ಷಕ್ಕಿಂತ ಮೇಲ್ಪಟ್ಟ ಶಿಕ್ಷಕರು ಕಡ್ಡಾಯವಾಗಿ ಮುಖಗವಸು ಧರಿಸಬೇಕು.

ರಾಜ್ಯದಲ್ಲಿ ಕೋವಿಡ್‌ನ ಪಾಸಿಟಿವಿಟಿ ದರ ಶೇ. ಒಂದಕ್ಕಿಂತ ಕಡಿಮೆ ಇದ್ದು, ಸೋಂಕು ಹರಡುವಿಕೆ ನಿಯಂತ್ರಣದಲ್ಲಿರುವುದರಿಂದ ಶಾಲೆಗಳನ್ನು ಆರಂಭಿಸಲು ತೀರ್ಮಾನ ಕೈಗೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಕೇರಳ ಮತ್ತು ಮಹಾರಾಷ್ಟ್ರ ಗಡಿಗೆ ಹೊಂದಿಕೊಂಡಿರುವ ರಾಜ್ಯದ ಕೊಡಗು, ಚಾಮರಾಜನಗರ, ಮೈಸೂರು, ಮಂಗಳೂರು, ಬೆಳಗಾವಿ, ಬೀದರ್ ಸೇರಿದಂತೆ ಗಡಿಭಾಗದ ಜಿಲ್ಲೆಗಳಲ್ಲೂ ಪಾಸಿಟಿವಿಟಿ ದರ ಶೇಕಡ ಒಂದಕ್ಕಿಂತಲೂ ಕಡಿಮೆ ಇದೆ, ಆದ್ದರಿಂದ ಈ ಜಿಲ್ಲೆಗಳಲ್ಲೂ ಆರ್ಥಿಕ ಚಟುವಟಿಕೆಗೆ ಅನುವು ಮಾಡುವುದಲ್ಲದೆ, ಶಾಲೆಗಳನ್ನು ಪುನರಾರಂಭಿಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ತಜ್ಞರು ನೀಡಿರುವ ಸಲಹೆಯಂತೆ ಮುಖ್ಯ ಕಾರ್ಯದರ್ಶಿ ಅವರು ಇಲಾಖಾಧಿಕಾರಿ ಗಳೊಂದಿಗೆ ಚರ್ಚಿಸಿ, ಈ ಮಕ್ಕಳಿಗೆ ಪ್ರತ್ಯೇಕ ಮಾರ್ಗಸೂಚಿಗಳನ್ನು ಹೊರಡಿಸಲಿದ್ದಾರೆ ಎಂದರು.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಅಕ್ಟೋಬರ್ 20ಕ್ಕೆ ದಸರಾ ರಜೆ ಮುಗಿಯಲಿದೆ, 25 ರಿಂದ ಒಂದರಿಂದ 12 ತರಗತಿವರೆಗಿನ ಎಲ್ಲಾ ಶಾಲೆಗಳು ಮತ್ತೆ ಪುನರಾರಂಭವಾಗಲಿವೆ ಎಂದರು.

ಒಂದರಿಂದ ಐದನೇ ತರಗತಿಗಳನ್ನು ಆರಂಭಿಸಲು ಜಿಲ್ಲಾಡಳಿತ ಸಂಪೂರ್ಣ ಸಜ್ಜುಗೊಂಡಿದೆ, ಸರ್ಕಾರ ಹೊರಡಿಸುವ ಕೋವಿಡ್ ನಿಯಮಾವಳಿಗಳನ್ನು ಆಧಾರವಾಗಿಟ್ಟುಕೊಂಡು ಪ್ರಾಥಮಿಕ ಶಾಲೆಗಳು ಕಾರ್ಯಾರಂಭ ಮಾಡಲಿವೆ ಎಂದವರು ಹೇಳಿದರು.

ವಾರದಲ್ಲಿ ಐದು ದಿನ ತರಗತಿಗಳು ಅರ್ಧ ದಿನ ನಡೆಯಲಿದ್ದು, ಅಂದಿನಿಂದಲೇ ಬಿಸಿ ಊಟವೂ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಆರಂಭವಾಗಲಿದೆ ಎಂದವರು ತಿಳಿಸಿದರು.

ಮಕ್ಕಳಿಗೆ ಹಾಜರಾತಿ ಕಡ್ಡಾಯವಿಲ್ಲ, ಅವರು ತರಗತಿಯಲ್ಲಿ ಬಂದು ಕಲಿಯಬಹುದು ಇಲ್ಲವೇ ಮನೆಯಿಂದಲೇ ಆನ್‌ಲೈನ್‌ನಲ್ಲಿ ಕಲಿಯಬಹುದು, ಇದು ಪೋಷಕರಿಗೆ ಬಿಟ್ಟ ವಿಚಾರ. ಈಗಾಗಲೇ ಆರರಿಂದ 12ನೇ ತರಗತಿವರೆಗಿನ ತರಗತಿಗಳ ಆರಂಭದ ನಂತರ ಗ್ರಾಮೀಣ ಭಾಗದಲ್ಲಿ ಶೇಕಡ 90ರಷ್ಟು ಹಾಜರಾತಿ ಇದ್ದು, ಎಲ್ಲಿಯೂ ತೊಂದರೆ ಎದುರಾಗಿಲ್ಲ ಎಂದರು.

ಮಕ್ಕಳಿಗೆ ಕೋವಿಡ್ ಲಸಿಕೆಯನ್ನೂ ಶಾಲೆಗಳಲ್ಲೇ ನೀಡಲು ನಿರ್ಧರಿಸಲಾಗಿದೆ ಎಂದು ನಾಗೇಶ್ ಇದೇ ಸಂದರ್ಭದಲ್ಲಿ ತಿಳಿಸಿದರು.

# ಉತ್ತರ ಪ್ರದೇಶ : ಕೋರ್ಟ್ ಆವರಣದಲ್ಲೇ ವಕೀಲನ ಹತ್ಯೆ

ಶಹಜಹಾನ್‌ಪುರ, ಅ. 18 – ಹಳೆಯ ವೈಷಮ್ಯದ ಹಿನ್ನೆಲೆಯಲ್ಲಿ ವಕೀಲರೊಬ್ಬರನ್ನು ಜಿಲ್ಲಾ ನ್ಯಾಯಾಲಯದ ಆವರಣದಲ್ಲೇ ಹತ್ಯೆಗೈದ ಘಟನೆ ಉತ್ತರ ಪ್ರದೇಶದ ಶಹಜಹಾನ್‌ಪುರದಲ್ಲಿ ನಡೆದಿದೆ. ಕರ್ತವ್ಯ ನಿರ್ಲಕ್ಷ್ಯದ ಆರೋಪದ ಮೇಲೆ ನಾಲ್ವರು ಪೊಲೀಸರನ್ನು ಅಮಾನತ್ತುಗೊಳಿಸಲಾಗಿದೆ.

58 ವರ್ಷದ ಭೂಪೇಂದ್ರ ಸಿಂಗ್ ಅವರು ಸುರೇಶ್ ಗುಪ್ತ ಎಂಬುವವರ ವಿರುದ್ಧ ಎರಡು ಡಜನ್ ಪ್ರಕರಣಗಳನ್ನು ದಾಖಲಿಸಿದ್ದರು. ಇದರಿಂದ ಆಕ್ರೋಶಗೊಂಡ ಗುಪ್ತ ಹತ್ಯೆ ಮಾಡಿರುವುದಾಗಿ ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಮೃತದೇಹದ ಬಳಿ ಅಕ್ರಮವಾದ 315 ಬೋರ್ ಪಿಸ್ತೂಲ್ ಕಂಡು ಬಂದಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಎಸ್. ಆನಂದ್ ತಿಳಿಸಿದ್ದಾರೆ.

ವಕೀಲ ಸುರೇಶ್ ಕುಮಾರ್ ಗುಪ್ತ ಹಾಗೂ ಅವರ ಇಬ್ಬರು ಮಕ್ಕಳಾದ ಗೌರವ್ ಗುಪ್ತ ಹಾಗೂ ಅಂಕಿತ್ ಗುಪ್ತ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

# ಶರಣ ಸಂಸ್ಕೃತಿ ಉತ್ಸವ ಜನರ ಆಶಾ ಕಿರಣ : ಯಡಿಯೂರಪ್ಪ ಶ್ಲಾಘನೆ

ಚಿತ್ರದುರ್ಗ, ಅ.18- ಕಳೆದ 30 ವರ್ಷಗಳಿಂದ ಮುರುಘಾ ಶರಣರು ತಮ್ಮದೇ ಆದ ವಿವಿಧ ಸಮಾಜಮುಖಿ ಕಾರ್ಯಗಳ ಮೂಲಕ ಸಮಾನತೆ ಸ್ಥಾಪಿಸಿದ್ದಾರೆ ಎಂದು ನಿಕಟಪೂರ್ವ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಇಂದಿಲ್ಲಿ ಮುರುಘಾ ಮಠದ ಅನುಭವ ಮಂಟಪದಲ್ಲಿ ಡಾ. ಶಿವಮೂರ್ತಿ ಮುರುಘಾ ಶರಣರ ಪೀಠಾರೋಹಣದ ತೃತೀಯ ದಶಮಾನೋತ್ಸವದ ಅಂಗವಾಗಿ ನಡೆದ ಗುರುವಂದನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ಶರಣಶ್ರೀ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಯಡಿಯೂರಪ್ಪ, ಬಸವಣ್ಣನವರ ಆದರ್ಶಗಳನ್ನು ಮುಂದಿಟ್ಟುಕೊಂಡು ಸಾಗುತ್ತಿರುವ ಈ ಮಠ ಬಸವ ತತ್ವ ಪ್ರಚಾರ ಮಾಡುತ್ತಿದೆ. ಪ್ರತಿ ವರ್ಷದ ಶರಣ ಸಂಸ್ಕೃತಿ ಉತ್ಸವ ಜನರ ಉತ್ಸವವಾಗಿದೆ. ಇದು ಜನರ ಆಶಾಕಿರಣ. 20 ಕೋಟಿ ರೂ.ಗಳನ್ನು ಬಸವಣ್ಣನವರ ಪುತ್ಥಳಿ



ನಿರ್ಮಾಣಕ್ಕೆ ತಾವು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಮಂಜೂರು ಮಾಡಿದ್ದೆ. ಅದರಲ್ಲಿ 5 ಕೋಟಿ ತಲುಪಿದ್ದು, ಉಳಿದದ್ದನ್ನು ತಲುಪಿಸುವ ಜವಾಬ್ದಾರಿಯನ್ನು ಮುಖ್ಯಮಂತ್ರಿ ಬೊಮ್ಮಾಯಿ ತೆಗೆದುಕೊಳ್ಳಬೇಕು ಎಂದರು.

'ಬಸವ ಭೂಷಣ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕರಾರು ರಹಿತ ಪ್ರೀತಿ, ಭಕ್ತಿಯನ್ನು ಸಮರ್ಪಣಾ ಭಾವದಿಂದ ಮಾಡಬೇಕು. ವೈಚಾರಿಕ ಕ್ರಾಂತಿಯೇ ಶರಣ ಸಂಸ್ಕೃತಿ, ಮನುಷ್ಯರನ್ನು ಮನುಷ್ಯರಾಗಿ ನೋಡುವುದೇ ಶರಣ ಸಂಸ್ಕೃತಿ. 12ನೇ ಶತಮಾನದ ಪ್ರತಿಪಾದನೆಯನ್ನು ಮುರುಘಾ ಶರಣರು ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಈಗ 21ನೇ ಶತಮಾನ, ಅಂಕಿಗಳು ತಿರುಗು ಮುರುಗಾಗಿವೆ. ಮನುಕುಲದ ಅಭಿವೃದ್ಧಿಯಾಗ ಬೇಕು. ಬಸವಣ್ಣ ಇಂದಿಗೂ ಪ್ರಸ್ತುತ. ಅಸಮಾನತೆ, ಲಿಂಗ, ಭೇದ ಇಂದಿಗೂ ಇದೆ. ಸಂಪೂರ್ಣವಾಗಿ ಇದನ್ನು ತೊಲಗಿಸುವ ಜವಾಬ್ದಾರಿ ಶರಣರಿಂದ ಪ್ರಾರಂಭವಾಗಿದೆ. ಇದನ್ನು ಎಲ್ಲರೂ ಮುಂದುವ ರೆಸಿಕೊಂಡು ಹೋಗುವುದು ಜನ ಸಾಮಾನ್ಯರ ಕರ್ತವ್ಯವಾಗಬೇಕು. ಮೌಢ್ಯಗಳು ತಮಗೆ ದುಃಖ ಉಂಟು ಮಾಡಿವೆ. ಸಾಮಾಜಿಕ (2ನೇ ಪುಟಕ್ಕೆ)

# ಬಂಗಾರದಿಂದ ಸುಖ ಸಿಗುವುದಿಲ್ಲ, ಬದುಕೇ ಬಂಗಾರದಂತಿರಬೇಕು



## ಹಲಸಬಾಳು : ಇಷ್ಟಲಿಂಗ ದೀಕ್ಷಾ ಕಾರ್ಯಕ್ರಮದಲ್ಲಿ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ವಿಶ್ಲೇಷಣೆ

ಮಲೇಬೆನ್ನೂರು, ಅ.18- ಸತ್ಯ, ಅಹಿಂಸೆ, ಪ್ರಾಮಾಣಿಕತೆ, ಸಹಕಾರ, ಪ್ರೀತಿ, ತ್ಯಾಗ ಎಂಬ ಗುಣಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಾಗ ಮಾತ್ರ ಅಂತರಂಗ, ಬಹಿರಂಗ ಶುದ್ಧಿಯಾಗಿ ಬದುಕಿಗೊಂದು ಭವ್ಯತೆ ಬರುತ್ತದೆ ಎಂದು ಸಾಣೇಹಳ್ಳಿ ಮಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ವಿಶ್ಲೇಷಿಸಿದರು.

ಹರಿಹರ ತಾಲ್ಲೂಕು ಹಲಸಬಾಳು ಗ್ರಾಮದಲ್ಲಿ ಇಂದು ಏರ್ಪಾಡಾಗಿದ್ದ ಶ್ರೀ ತರಳಬಾಳು ಯುವಕ ಹಾಗೂ ಮಹಿಳಾ ಸಂಘಗಳ ಗ್ರಾಮ ಘಟಕಗಳ ಉದ್ಘಾಟನೆ ಮತ್ತು ಇಷ್ಟಲಿಂಗ ದೀಕ್ಷಾ ಕಾರ್ಯಕ್ರಮದ ಜೊತೆಗೆ ಭರಮಸಾಗರ ಏತ ನೀರಾವರಿ ಯೋಜನೆಗೆ ಭೂಮಿ ಕೊಟ್ಟ ರೈತರಿಗೆ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದ ಸಾನ್ನಿಧ್ಯ ವಹಿಸಿ, ಶ್ರೀಗಳು ಆಶೀರ್ವಚನ ನೀಡಿದರು.

ಬಂಗಾರದಿಂದ ಸುಖ ಸಿಗುವುದಿಲ್ಲ. ನಮ್ಮ ಬದುಕೇ ಬಂಗಾರವಾಗಿರಬೇಕು. ಈ ನಿಟ್ಟಿನಲ್ಲಿ ಸದ್ಗುಣಗಳನ್ನು ಮೈಗೂಡಿಸಿಕೊಂಡರೆ, ಮನುಷ್ಯನೇ ಬಂಗಾರವಾಗುತ್ತಾನೆ. ಪಕ್ಕೀರರಂತೆ ಬದುಕಿ, ಜಗತ್ತಿಗೆ ಸಂದೇಶ ನೀಡಿದ ಗಾಂಧೀ, ಬುದ್ಧ, ಯೇಸು, ಪೈಗಂಬರ್ ಅವರು ಇಂದಿಗೂ ಜನಮಾನಸದಲ್ಲಿ ಉಳಿದಿದ್ದಾರೆ. ಅದಕ್ಕೆ ಕಾರಣ ಅವರು ಮೊದಲು (2ನೇ ಪುಟಕ್ಕೆ)

# ನಕಲಿ ಅಂಕ ಪಟ್ಟಿ : ಬಿಜೆಪಿ ಶಾಸಕನಿಗೆ ಐದು ವರ್ಷ ಜೈಲು

ಅಯೋಧ್ಯೆ, ಅ. 18 – ಇಪ್ಪತ್ತೆರಡು ವರ್ಷಗಳ ಹಳೆಯ ನಕಲಿ ಅಂಕಪಟ್ಟಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅಯೋಧ್ಯೆಯ ಗೋಸಾಯಿಗಂಜ್ ಕ್ಷೇತ್ರದ ಬಿಜೆಪಿ ಶಾಸಕ ಇಂದ್ರ ಪ್ರತಾಪ್ ತಿವಾರಿಗೆ ವಿಶೇಷ ನ್ಯಾಯಾಲಯ ಐದು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಸಂಸದ/ಶಾಸಕರ ವಿಶೇಷ ನ್ಯಾಯಾಲಯದ ನ್ಯಾಯಮೂರ್ತಿ ಪೂಜಾ ಸಿಂಗ್ ಅವರು ತೀರ್ಪು ನೀಡಿದ್ದು, ನಂತರ ತಿವಾರಿ ಬಂಧಿಸಲಾಗಿದೆ. ನ್ಯಾಯಾಲಯ ತಿವಾರಿಗೆ 8 ಸಾವಿರ ರೂ.ಗಳ ದಂಡವನ್ನೂ ವಿಧಿಸಿದೆ.

ಕಾಲೇಜಿನಲ್ಲಿ ಪ್ರವೇಶ ಪಡೆಯಲು ನಕಲಿ ಅಂಕಪಟ್ಟಿ ರೂಪಿಸಲಾಗಿತ್ತು. ಈ ಬಗ್ಗೆ 1992ರಲ್ಲಿ ಅಯೋಧ್ಯೆಯ ಸಾಕೇತ್ ಪದವಿ ಕಾಲೇಜಿನ ಆಗಿನ ಪ್ರಾಂಶುಪಾಲರು ರಾಮ ಜನ್ಮಭೂಮಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಪದವಿಯ 2ನೇ ವರ್ಷದಲ್ಲಿ ಫೇಲ್ ಆಗಿದ್ದ ತಿವಾರಿ, ಮುಂದಿನ ವರ್ಷಕ್ಕೆ ಸೇರ್ಪಡೆಯಾಗಲು ನಕಲಿ ಅಂಕಪಟ್ಟಿ ನೀಡಿದ್ದಾಗಿ ಆರೋಪಿಸಲಾಗಿತ್ತು. 13 ವರ್ಷಗಳ ನಂತರ (2ನೇ ಪುಟಕ್ಕೆ)

# ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಖಾಸಗಿ ಜನ್ಮ ದಿನ ನಿಷೇಧ

ಬೆಂಗಳೂರು, ಅ. 19 -ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಸಂಸ್ಥೆಯ ಸಿಬ್ಬಂದಿ, ಅಧಿಕಾರಿಗಳು, ರಾಜಕೀಯ ಮುಖಂಡರೂ ಸೇರಿದಂತೆ ಖಾಸಗಿ ವ್ಯಕ್ತಿಗಳು ತಮ್ಮ ಮಕ್ಕಳ ಜನ್ಮ ದಿನ ಆಚರಿಸಿಕೊಳ್ಳುವುದನ್ನು ರಾಜ್ಯ ಸರ್ಕಾರ ನಿಷೇಧಿಸಿದೆ.

ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳು, ಬಾಲ ಕಾರ್ಮಿಕ ಪದ್ಧತಿಯಿಂದ ರಕ್ಷಿಸಲ್ಪಟ್ಟವರು, ಬಾಲ್ಯ ವಿವಾಹಕ್ಕೆ ಒಳಗಾದ, ಅತ್ಯಾಚಾರಕ್ಕೆ ಒಳಗಾದ, ತಂದೆ - ತಾಯಿಯಿಂದ ತಿರಸ್ಕರಿಸಲ್ಪಟ್ಟ, ತಂದೆ ಅಥವಾ ತಾಯಿ ಇಲ್ಲದ, ಭಿಕ್ಷಾಟನೆಯಿಂದ ರಕ್ಷಿಸಲ್ಪಟ್ಟ ಮತ್ತಿತರೆ ಮಕ್ಕಳನ್ನು ದಾಖಲಿಸಲಾಗಿರುತ್ತದೆ. ಇವರ ಮನಸ್ಸಿಗೆ ಖುಷಿ ತರುವಂತಹ ಸೃಜನಶೀಲತೆಯ ಕಾರ್ಯಕ್ರಮಗಳನ್ನು ಏರ್ಪಡಿಸಿ, ಮಕ್ಕಳ ಮನಸ್ಸು ಸದೃಢ ಹಾಗೂ ಆಹ್ಲಾದಕರವಾಗುವಂತೆ ಪ್ರೋತ್ಸಾಹಿಸಬೇಕಾಗುತ್ತದೆ ಎಂದು ಮಕ್ಕಳ ರಕ್ಷಣಾ ನಿರ್ದೇಶನಾಲಯದ ಆದೇಶದಲ್ಲಿ ತಿಳಿಸಲಾಗಿದೆ.

ಆದರೆ, ಹೊರಗಿನ ವ್ಯಕ್ತಿಗಳು ತಮ್ಮ ಮಕ್ಕಳ ಹುಟ್ಟುಹಬ್ಬ ಆಚರಿಸಿ, ಕೇಕ್ ಕತ್ತರಿಸಿ, ಸಿಹಿ ಹಂಚುವ ಇತ್ಯಾದಿ ಅದ್ದೂರಿ ಕಾರ್ಯಕ್ರಮಗಳನ್ನು ಆಚರಿಸುವುದರಿಂದ ಮಕ್ಕಳ ಪಾಲನಾ ಸಂಸ್ಥೆಯ ಮಕ್ಕಳಿಗೆ (3ನೇ ಪುಟಕ್ಕೆ)

# ಕೆಜಿಗೆ 93 ರೂ.ಗಳವರೆಗೆ ತಲುಪಿದ ಟೊಮ್ಯಾಟೋ

ನವದೆಹಲಿ, ಅ. 18 – ದೇಶದ ಹಲವು ಕಡೆಗಳಲ್ಲಿ ಚಿಲ್ಲರೆ ಟೊಮ್ಯಾಟೋ ಮಾರಾಟ ಬೆಲೆ ಕೆಜಿಗೆ 93 ರೂ.ಗಳವರೆಗೆ ತಲುಪಿದೆ. ಅಕಾಲಿಕ ಮಳೆ ಯಿಂದಾಗಿ ಬೆಳೆ ಹಾನಿಯಾಗಿರುವುದೇ ಇದಕ್ಕೆ ಕಾರಣ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

50ಕ್ಕೂ ಹೆಚ್ಚು ನಗರಗಳಲ್ಲಿ ಟೊಮ್ಯಾಟೋ ಬೆಲೆ ಕೆಜಿಗೆ 50 ರೂ.ಗಳಿಗಿಂತ ಹೆಚ್ಚಾಗಿದೆ. ಸಗಟು ಮಾರುಕಟ್ಟೆಯಲ್ಲೂ ಟೊಮ್ಯಾಟೋ ಬೆಲೆ ಏರುಮುಖವಾಗಿದೆ.


ಸವಿನೆನಪು




ದಿ. ಶ್ರೀ ಭೀಮಾನಾಯ್ಕ ಕೆ.ಎ.ಎಸ್.
ನಿವೃತ್ತ ಅಸಿಸ್ಟೆಂಟ್ ಕಮೀಷನರ್
ನಿಧನ : 19.10.2019
ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು.
ನೀವು ತೋರಿದ ಮಾರ್ಗದರ್ಶನದಲ್ಲಿ,
ಸದಾ ನಿಮ್ಮ ನೆನಪಿನಲ್ಲಿರುವ ;
ಧರ್ಮಪತ್ನಿ : ಶ್ರೀಮತಿ ಅನುಸೂಯ ಭೀಮಾನಾಯ್ಕ್ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಸಹೋದರ-ಸಹೋದರಿಯರು ಹಾಗೂ ಬಂಧು-ಮಿತ್ರರು. ಕಬ್ಬಳ, ಚನ್ನಗಿರಿ ತಾಲ್ಲೂಕು

SPOT ADMISSION
Susltrutha Arogya Pratislitana (R)
SUSHRUTHA INSTITUTE OF PHARMACY
RS.Lo 151, 1. Near Srirama Nagar, Pamenahalli Canal Road, Pamenahalli, DAVANAGERE
Recognized by Govt. of Karnataka, Approved by PCI, New Delhi.
Admission Open 2021-22 for
D. PHARM
(Diploma in Pharmacy) - 2 Year. Courses
Few Seats Available | Hurry Up | No Donation
Eligibility for D. Pharm
- 10, +2 Passed.
- Must have studied Physics, Chemistry
- Candidates should be a minimum of 17 years of age.
Highlight
- Qualified and experience staff
- Well equipped laboratories / library
- Modern Infrastructure
- Workshops / Seminars
- Spacious & Technology Enabled Classroom
- Encouragement for Sports
- College is situated in heart of the city,
- morethan 10 Acre Greenish Campus
- Co-curricular Activities
- Career counseling
- Skill Development
- Scholarship for meritorious Students
- Wi-Fi enabled campus with 35mbps bandwidth
- Good study material
For Admission Enquire Principal Mob: +91 8147139924, 8606857152

ಉಬ್ಬಿರುವ ರಕ್ತನಾಳಗಳ ಸಮಸ್ಯೆಗೆ ದಾವಣಗೆರೆಯಲ್ಲಿ ನೋವು ರಹಿತ ಹಾಗೂ ಶಾಶ್ವತ ಪರಿಹಾರ...
AVIS HOSPITALS
20.10.2021ನೇ ಬುಧವಾರ
ಉಬ್ಬಿರುವ ರಕ್ತನಾಳಗಳಿಗೆ ಅತ್ಯುತ್ತಮ ಚಿಕಿತ್ಸೆ
100% ಸುರಕ್ಷಿತ ಹಾಗೂ ವೇಗದ ಚೇತರಿಕೆ







ಡಾ।। ವಿನಯ್ ನ್ಯಾಪತಿ
ವ್ಯಾಸ್ಕುಲರ್ & ಇಂಟರ್‌ವೆನ್ಷನಲ್ ರೇಡಿಯಾಲಜಿಸ್ಟ್
ಶ್ರೀ ರಾಮಕೃಷ್ಣ ನರ್ಸಿಂಗ್ ಹೋಂ & ಲ್ಯಾಪ್ರಾಲಜಿ ಸೆಂಟರ್
#757/35, 8ನೇ ಮೇನ್
ಪಿ.ಜೆ. ಬಡಾವಣೆ, ದಾವಣಗೆರೆ -2
ಸಂದರ್ಶನಕ್ಕಾಗಿ ಸಂಪರ್ಕಿಸಿ :
+91-8088837000
/avisvascularcentre
www.avisvascularcentre.com
/avisvascularcentre www.avisvascularcentre.com

ಹೃದಯಪೂರ್ವಕ ಅಭಿನಂದನೆಗಳು



ದಾವಣಗೆರೆ ದಕ್ಷಿಣ ವಲಯ ಸಂಚಾರಿ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಆಗಿ ಸೇವೆ ಸಲ್ಲಿಸುತ್ತಿದ್ದ ಹೊಳಲ್ಕೆರೆ ತಾಲ್ಲೂಕು ಮಾಳೇನಹಳ್ಳಿ ಗ್ರಾಮದವರೂ, ನಮ್ಮ ಆತ್ಮೀಯ ಸಹೋದರರೂ ಆದ
ಶ್ರೀ ಕೆ. ಶ್ರೀಧರ್ ನಾಯಕ್ ಅವರು
ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಹುದ್ದೆಗೆ ಮುಂಬಡ್ತಿ ಪಡೆದು
ಬೆಂಗಳೂರಿನ ಇಂಟಲಿಜೆನ್ಸಿಗೆ ನೇಮಕವಾಗಿದ್ದು, ಶ್ರೀಯುತರಿಗೆ ಹಾರ್ದಿಕ ಅಭಿನಂದನೆಗಳು.



ಡಿ.ಬಿ. ಪ್ರವೀಣ್ ಶಾಮನೂರು
ಯುವ ಮುಖಂಡರು

## ಹಾಲಸ್ವಾಮಿಗಳ ಸರಳ ರಥೋತ್ಸವ



ಹರಪನಹಳ್ಳಿ

ಹರಪನಹಳ್ಳಿ, ಅ.18- ಕೋವಿಡ್ ಭೀತಿಯ ಹಿನ್ನೆಲೆಯಲ್ಲಿ ಪಟ್ಟಣದ ವಾಲ್ಮೀಕಿ ನಗರದಲ್ಲಿ ಪವಾಡ ಪುರುಷ ಶ್ರೀ ಹಾಲಸ್ವಾಮಿಗಳ ರಥೋತ್ಸವ ಭಕ್ತ ಸಮೂಹದ ನಡುವೆ ಸರಳವಾಗಿ ಜರುಗಿತು.

ಸಣ್ಣ ಹಾಲಸ್ವಾಮಿಗಳ ನೇತೃತ್ವದಲ್ಲಿ ರಥೋತ್ಸವ ಜರುಗಿದ್ದು, ಪುರಸಭೆ ಸದಸ್ಯ ದ್ಯಾಮಜ್ಜಿ ರೊಕ್ಕಪ್ಪ, ಬಳ್ಳಾರಿ ಜಿಲ್ಲಾ ಎಸ್ಟಿ ಮೋರ್ಚಾ ಕಾರ್ಯದರ್ಶಿ ಆರ್. ಲೋಕೇಶ್, ಹಳೇಬೇಡರ ಪರಸಪ್ಪ, ಮಂಡಕ್ಕಿ ಸುರೇಶ್, ನಿಟ್ಟೂರು ಹಾಲಪ್ಪ, ಕೆ. ಅಂಜಿನಪ್ಪ, ರಾಯದುರ್ಗ ದುರುಗಪ್ಪ, ಸಿ. ನಾಗಪ್ಪ, ಯಲ್ಲಜ್ಜಿ ಕೊಟ್ರಪ್ಪ, ಆಲೂರು ಚೌಡಪ್ಪ, ತಳವಾರ ನಾಗಪ್ಪ, ಗಿಡ್ಡಳ್ಳಿ ಬಸವರಾಜ್, ಸಿ. ವಿರೂಪಾಕ್ಷಿ, ಪುರಸಭೆ ನಾಮ ನಿರ್ದೇಶಿತ ಸದಸ್ಯ ಕೆಂಗಳ್ಳಿ ಪ್ರಕಾಶ್, ಮುಖಂಡರಾದ ಗುಂಡಿ ಮಂಜಪ್ಪ, ದ್ಯಾಮಜ್ಜಿ ಆನಂದ, ಬೆಲ್ಲದ ಅಣ್ಣಪ್ಪ, ಯಲ್ಲಜ್ಜಿ ಹನುಮಂತ, ದ್ಯಾಮಜ್ಜಿ ಕೃಷ್ಣ, ಗಿಡ್ಡಳ್ಳಿ ಅಜ್ಜಯ್ಯ ಉಪಸ್ಥಿತರಿದ್ದರು.

# ನ. 14 ರವರೆಗೆ ಪ್ರತಿ ಹಳ್ಳಿಗಳಲ್ಲೂ ಉಚಿತ ಕಾನೂನು ಅರಿವು



ದಾವಣಗೆರೆ, ಅ.18- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಶಿಕ್ಷಣ ಇಲಾಖೆ, ಅಭಿಯೋಜನೆ ಇಲಾಖೆ ಸಹಯೋಗದಲ್ಲಿ ಕಾನೂನು ಅರಿವು ಮೂಡಿಸುವ ಕಾರ್ಯಕ್ರಮ, ಪ್ರತಿ ಗ್ರಾಮದಲ್ಲೂ ನಡೆಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರೂ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ರಾಜೇಶ್ವರಿ ಹೆಗಡೆ ತಿಳಿಸಿದ್ದಾರೆ..

ನಗರದ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯದ ಸಭಾಂಗಣದಲ್ಲಿ ಪ್ಯಾನ್ ಇಂಡಿಯಾ ಅವೇರ್‌ನೆಸ್ ಅಂಡ್ ಔಟ್‌ರೀಚ್ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಸುದ್ದಿಗೋಷ್ಠಿಯಲ್ಲಿ ಅವರು ಈ ವಿಷಯ ತಿಳಿಸಿದರು..

ಎಲ್ಲರಿರೂ ನೆಮ್ಮದಿ ಜೀವನ ನಡೆಸುವ ಹಕ್ಕನ್ನು ಸಂವಿಧಾನ ಕಲ್ಪಿಸಿದ್ದು, ಗ್ರಾಮೀಣ ಜನರಲ್ಲಿ ಕಾನೂನು ಅರಿವಿನ ಕೊರತೆ ಇದೆ. ಆದ್ದರಿಂದ ಪ್ರತಿ ಗ್ರಾಮದಲ್ಲೂ ಕಾನೂನು ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಅ. 2 ರಂದು ಚಾಲನೆ ನೀಡಲಾಗಿದ್ದು, ನ. 14 ರವರೆಗೆ ನಡೆಯಲಿದೆ ಎಂದರು.

75 ನೇ ವರ್ಷದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರದ ನಿರ್ದೇಶನದಂತೆ, ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ ಕಾನೂನು ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಕಾನೂನು ಸೇವೆಗಳ ಪ್ರಾಧಿಕಾರ ಜನರ ಹಕ್ಕುಗಳ ಸಂರಕ್ಷಣೆಗೆ ಬದ್ಧವಾಗಿದೆ. ಕಾನೂನಿನ ಅರಿವು ಮೂಡಿಸುವುದು, ಉಚಿತ ಕಾನೂನು ಸಲಹೆ ಮತ್ತು ನೆರವು ನೀಡುವುದು, ಲೋಕ್ ಅದಾಲತ್ ಮೂಲಕ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಪಡಿಸುವುದು ಪ್ರಮುಖ ಜವಾಬ್ದಾರಿಯಾಗಿದೆ ಎಂದರು.

ದಾವಣಗೆರೆ ತಾಲ್ಲೂಕಿನಲ್ಲಿ ಅ. 2 ರಿಂದ 10 ರವರೆಗೆ, ಜಗಳೂರು ತಾಲ್ಲೂಕಿನಲ್ಲಿ ಅ. 11 ರಿಂದ 18 ರವರೆಗೆ ಹಮ್ಮಿಕೊಳ್ಳಲಾಗಿತ್ತು. ಹರಿಹರ ತಾಲ್ಲೂಕಿನಲ್ಲಿ ನಾಳೆ (19 ) ಯಿಂದ ಅ. 26 ರವರೆಗೆ, ಹೊನ್ನಾಳಿ ತಾಲ್ಲೂಕಿನಲ್ಲಿ 27 ರಿಂದ 31 ರವರೆಗೆ, ಚನ್ನಗಿರಿ ತಾಲ್ಲೂಕಿನಲ್ಲಿ ನ. 4 ರಿಂದ 14 ರವರೆಗೆ ನಿರಂತರವಾಗಿ ಕಾನೂನು ಜಾಗೃತಿ ಕಾರ್ಯಕ್ರಮಗಳು ನಡೆಯಲಿವೆ.

ಎಸ್ಸಿ, ಎಸ್ಟಿಗೆ ಸೇರಿದವರು, ಮಾನಸಿಕ ಅಥವಾ ಬೇರಾವುದೇ ನ್ಯೂನತೆಗೆ ಒಳಗಾಗಿರುವವರು, ಮಹಿಳೆ ಮತ್ತು ಮಕ್ಕಳು, ಕಾರ್ಖಾನೆ ಕಾರ್ಮಿಕರು, ಗುಂಪು ಘರ್ಷಣೆ, ಗಲಭೆ, ಪ್ರವಾಹ, ಭೂಕಂಪ, ಕೈಗಾರಿಕಾ ವಿನಾಶ ಮುಂತಾದ ವುಗಳಿಗೆ ತುತ್ತಾದವರು, ದೈಹಿಕ ವ್ಯಾಪಾರ ಅಥವಾ ಜೀತಕ್ಕೊಳಗಾದವರು, ರಕ್ಷಣಾ ಗೃಹ, ಮನೋರೋಗಿಗಳ ಆಸ್ಪತ್ರೆ ಮುಂತಾದವುಗಳಲ್ಲಿ ಅಭಿರಕ್ಷೆಯಲ್ಲಿರುವವರು, ಮತೀಯ ಕಾರಣದಿಂದ ದೌರ್ಜನ್ಯಕ್ಕೆ ಬಲಿಯಾದವರು, ವಾರ್ಷಿಕ 3 ಲಕ್ಷ ರೂ.ಗಳಿಗಿಂತ ಕಡಿಮೆ ಇರುವವರು ಉಚಿತ ಕಾನೂನು ಸಲಹೆ ಮತ್ತು ನೆರವು ಪಡೆಯಲು ಅರ್ಹರಿರುತ್ತಾರೆ ಎಂದು ರಾಜೇಶ್ವರಿ ಹೆಗಡೆ ಅವರು ಮಾಹಿತಿ ನೀಡಿದರು.

ಹೆಚ್ಚಿನ ಮಾಹಿತಿಗಾಗಿ ದಾವಣಗೆರೆ ಹಳೆಯ ನ್ಯಾಯಾಲಯ ಸಂಕೀರ್ಣದಲ್ಲಿರುವ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ (08192-296364), ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರ ಹರಿಹರ (08192-296885), ಹೊನ್ನಾಳಿ (08188-251732), ಚನ್ನಗಿರಿ (08189-229195), ಜಗಳೂರು (08196-227600) ಇವರನ್ನು ಸಂಪರ್ಕಿಸಬಹುದು.

ಹಿರಿಯ ಸಿವಿಲ್ ನ್ಯಾಯಾಧೀಶರೂ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ ನಾಯಕ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಡಿ.ಪಿ. ಬಸವರಾಜ್, ಹಿರಿಯ ಸಹಾಯಕ ಸಾರ್ವಜನಿಕ ಅಭಿಯೋಜಕ ಎ.ಎಂ. ಬಸವರಾಜ್ ಮತ್ತು ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ನಗರದಲ್ಲಿ 24ರಂದು ರಂಗ ತರಬೇತಿ

ದಾವಣಗೆರೆ, ಅ. 18- ಚಿತ್ರದುರ್ಗದ ಬಾದರದಿನ್ನಿ ಆರ್ಟ್ಸ್ ಅಕಾಡೆಮಿ ಹಾಗೂ ದಾವಣಗೆರೆಯ ರಂಗ ಅನಿಕೇತನ ತಂಡದ ಆಶ್ರಯದಲ್ಲಿ ಇದೇ 24 ರಿಂದ ನವೆಂಬರ್ 2 ರವರೆಗೆ 10 ದಿನಗಳ ಕಾಲ ನಗರದ ಸರ್ಕಾರಿ ಐಟಿಐ ಕಾಲೇಜಿನಲ್ಲಿ ರಂಗ ತರಬೇತಿ ಕಾರ್ಯಾಗಾರ ಆಯೋಜಿಸಲಾಗಿದೆ.

ಕಾರ್ಯಾಗಾರದಲ್ಲಿ ರಂಗಾಭಿನಯ ಹಾಗೂ ರಂಗಗೀತೆಗಳ ತರಬೇತಿ ನೀಡಲಾಗುವುದು. ರಂಗಕರ್ಮಿ ಮಹಾಂತೇಶ ಆದಿಮ ಅವರ ಸಾರಥ್ಯದಲ್ಲಿ ಕಾರ್ಯಾಗಾರ ನಡೆಯಲಿದ್ದು, 12 ವರ್ಷ ಮೇಲ್ಪಟ್ಟ ಆಸಕ್ತರು ಕಾರ್ಯಾಗಾರದಲ್ಲಿ ಭಾಗವಹಿಸಬಹುದು. ವಿವರಕ್ಕೆ ಸಂಪರ್ಕಿಸಿ : 7019838610, 9535651553, 9886079678.

## ಆಧುನಿಕ ಹೈನುಗಾರಿಕೆ ತರಬೇತಿ

ದಾವಣಗೆರೆ, ಅ.18- ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಇದೇ ದಿನಾಂಕ 21 ರಿಂದ 22 ರವರೆಗೆ 2 ದಿನಗಳ ಆಧುನಿಕ ಹೈನುಗಾರಿಕೆ ತರಬೇತಿ ಹಮ್ಮಿಕೊಳ್ಳಲಾಗಿದೆ. ಆಸಕ್ತಿಯುಳ್ಳ ರೈತರು, ಮಹಿಳೆಯರು, ನಿರುದ್ಯೋಗಿ ಯುವಕ ಅಥವಾ ಯುವತಿಯರು ಇದರ ಅನುಕೂಲ ಪಡೆಯಬಹುದು. ವಿವರಕ್ಕೆ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರ (ದೂರವಾಣಿ : 08192-233787) ವನ್ನು ಸಂಪರ್ಕಿಸಬಹುದು.

## ಕೆನರಾ ಬ್ಯಾಂಕ್‌ನಿಂದ ಕೌಶಲ್ಯ ತರಬೇತಿ

ದಾವಣಗೆರೆ, ಅ.18- ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ, ರೇಷ್ಮೆ ಇಲಾಖೆ ಆವರಣ, ಹಳೇ ತೋಳಹುಣಸೆ ಹಾಗು ಜಿಲ್ಲಾ ಪಂಚಾಯತ್ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಯುವಕ-ಯುವತಿಯರಿಗೆ ಮೊಬೈಲ್ ರಿಪೇರಿ ತರಬೇತಿ, ಎಲೆಕ್ಟ್ರಿಕ್ ಮೋಟಾರ್ ರಿವೈಂಡಿಂಗ್ ಅಂಡ್ ಸರ್ವಿಸಸ್ ತರಬೇತಿ ಮತ್ತು ಫಾಸ್ಟ್‌ಫುಡ್ ತಯಾರಿಕೆ ತರಬೇತಿ ನೀಡಲಾಗುವುದು. ವಿವರಕ್ಕೆ ಸಂಪರ್ಕಿಸುವ ದೂರವಾಣಿ 9481977076, 7975139332, 9964111314, 9538395817.

## ಮಕ್ಕಳ ಜನ್ಮ ದಿನ ನಿಷೇಧ

**(1ನೇ ಪುಟದಿಂದ)** ಅವರ ಹುಟ್ಟು ಹಬ್ಬ ಈ ರೀತಿ ಆಚರಿಸಿಕೊಳ್ಳಲು ಸಾಧ್ಯವಾಗದ ಭಾವನೆ ಮೂಡಿ, ಹೋಲಿಕೆ ಮಾಡಿಕೊಂಡಲ್ಲಿ ಈ ಮಕ್ಕಳ ಮನಸ್ಸಿನ ಮೇಲೆ ದುಷ್ಪರಿಣಾಮವಾಗುತ್ತದೆ.

ಇದು ಮಕ್ಕಳ ಮನಸ್ಸು ದುರ್ಬಲ ಮಾಡುವ ಸಂಭವ ಹೆಚ್ಚಾಗಿರುತ್ತದೆ. ಇಂತಹ ಆಚರಣೆಗಳು ಮಕ್ಕಳ ಆತ್ಮಾಭಿಮಾನ, ಆತ್ಮಗೌರಕ್ಕೆ ಧಕ್ಕೆ ತರುತ್ತವೆ ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

ಸದರಿ ಮಕ್ಕಳು ಕುಟುಂಬದಲ್ಲಿ ಬೆಳೆಯುವ ಬೇರೆ ಯಾವುದೇ ಮಗುವಿಗಿಂತ ಕಡಿಮೆ ಇಲ್ಲ ಎಂಬ ಭಾವನೆ ಕಾಪಾಡುವ ಸಲುವಾಗಿ ಈ ಮಕ್ಕಳ ಹುಟ್ಟುಹಬ್ಬ ಹಾಗೂ ಸರ್ಕಾರದ ಆದೇಶದ ಮೂಲಕ ನಿಗದಿ ಪಡಿಸಿದ ವ್ಯಕ್ತಿಗಳ ಹುಟ್ಟುಹಬ್ಬ ಆಚರಣೆ ಹೊರತು ಪಡಿಸಿ ಮಕ್ಕಳ ಪಾಲನಾ ಸಂಸ್ಥೆ ಗಳಲ್ಲಿ ಬೇರೆ ಯಾರ ಹುಟ್ಟುಹಬ್ಬ ಆಚರಿಸುವುದನ್ನು ನಿಷೇಧಿಸಿರುವುದಾಗಿ ಆದೇಶದಲ್ಲಿ ತಿಳಿಸಲಾಗಿದೆ.

## ವಿಕಲಚೇತನರ ಕ್ಷೇತ್ರದಲ್ಲಿ ಉತ್ತಮ ಸೇವೆ ಶಿಕ್ಷಕರಿಗೆ ರಾಜ್ಯ ಪ್ರಶಸ್ತಿ : ಅರ್ಜಿ

ದಾವಣಗೆರೆ, ಅ. 18- ವಿಕಲಚೇತನರ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿರುವ ವ್ಯಕ್ತಿ, ಸಂಸ್ಥೆ ಮತ್ತು ವಿಶೇಷ ಶಾಲೆಗಳಲ್ಲಿ ಸೇವೆ ಸಲ್ಲಿಸಿದ, ಸಲ್ಲಿಸುತ್ತಿರುವ ಶಿಕ್ಷಕರಿಗೆ ರಾಜ್ಯ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಇದೇ ದಿನಾಂಕ 21 ಕೊನೆಯ ದಿನವಾಗಿರುತ್ತದೆ.

ನಿಗದಿತ ಅರ್ಜಿ ನಮೂನೆಯನ್ನು ಇಲಾಖೆಯ ಕಚೇರಿಯಲ್ಲಿ ಅಥವಾ ವೆಬ್‌ಸೈಟ್‌ನಲ್ಲಿಯೂ www.dwdsc.kar.nic.in ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಗಳ ಕಛೇರಿ, ಶಂಕರಲೀಲಾ ಗ್ಯಾಸ್ ಏಜೆನ್ಸಿ ಹತ್ತಿರ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ. ವಿಕಲಚೇತನರ ಸಹಾಯವಾಣಿ ದೂರವಾಣಿ: 08192-263939 ಇವರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕ ಸಬಲೀಕರಣ ಅಧಿಕಾರಿ ಡಾ. ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

# ವಾರ್ಡಿನ ಮೂಲಸೌಕರ್ಯ ವಿಚಾರ: ಮೇಯರ್ ವೀರೇಶ್ ಸಮ್ಮುಖದಲ್ಲೇ ಸ್ಥಳೀಯರ ಮಧ್ಯೆ ಜಗಳ

ದಾವಣಗೆರೆ, ಅ.18- ನಗರ ಪಾಲಿಕೆ ವ್ಯಾಪ್ತಿಯ 31ನೇ ವಾರ್ಡ್‌ನ ಆಂಜನೇಯ ಬಡಾವಣೆಗೆ ಮೂಲ ಸೌಕರ್ಯ ಕಲ್ಪಿಸುವ ವಿಚಾರವಾಗಿ ವಾರ್ಡಿನ ಪಾಲಿಕೆ ಸದಸ್ಯರ ಮನವಿ ಮೇರೆಗೆ ವಾರ್ಡಿಗೆ ಮೇಯರ್ ಎಸ್.ಟಿ. ವೀರೇಶ್ ಅವರು ಪಾಲಿಕೆ ಅಧಿಕಾರಿಗಳ ಸಹಿತ ಭೇಟಿ ನೀಡಿದ್ದ ವೇಳೆ ಕ್ಷುಲ್ಲಕ ಕಾರಣಕ್ಕೆ ಕೆಲವರ ಮಧ್ಯೆ ಜಗಳವಾದ ಘಟನೆ ಇಂದು ನಡೆದಿದೆ.

ನಗರದ ಹೊರ ವಲಯದ ಕಾಟನ್ ಮಿಲ್ ಪ್ರದೇಶದಲ್ಲಿ ಒಳ ಚರಂಡಿ ತುಂಬಿ ಹರಿಯುತ್ತಿದ್ದು, ರಸ್ತೆ, ಚರಂಡಿ, ಬೀದಿ ದೀಪ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸುವ ಹಿನ್ನೆಲೆಯಲ್ಲಿ ತಮ್ಮ ವಾರ್ಡ್‌ಗೆ ಭೇಟಿ ನೀಡುವಂತೆ ವಾರ್ಡ್ ಸದಸ್ಯ ಪಾಮೇನಹಳ್ಳಿ ನಾಗರಾಜ್ ಮನವಿ ಮೇರೆಗೆ ಅಧಿಕಾರಿಗಳ ಸಮೇತ ಮೇಯರ್ ವೀರೇಶ್ ಸ್ಥಳಕ್ಕೆ ಭೇಟಿ ನೀಡಿದ್ದರು.

ಮಳೆಗಾಲದಲ್ಲಿ ತೀವ್ರ ತೊಂದರೆಯಾಗುತ್ತಿರುವ ಹಿನ್ನೆಲೆಯಲ್ಲಿ ಬೀದಿ ದೀಪಗಳನ್ನು, ಇನ್ನೂ ರಸ್ತೆ ಸೇರಿದಂತೆ ಮೂಲ ಸೌಕರ್ಯಗಳ ಕೊರತೆಯಾಗುತ್ತಿದೆ. ಡೆಕ್ ಸ್ಲಾಬ್ ನಿರ್ಮಿಸಲು ಇಲ್ಲಿರುವ ಶೆಡ್ ತೆರವು ಮಾಡಿಸಬೇಕೆಂದು ಸ್ಥಳೀಯರು ಮೇಯರ್ ಗೆ ಒತ್ತಾಯಿಸಿದರು. ಅಲ್ಲಿ ಶೆಡ್ ಕಟ್ಟಿಕೊಂಡಿದ್ದ ವ್ಯಕ್ತಿ ಯಾವುದೇ ಕಾರಣಕ್ಕೂ ಶೆಡ್ ತೆರವು ಮಾಡುವುದಿಲ್ಲವೆಂದು ಪಟ್ಟು ಹಿಡಿದರು. ಆಗ ಕೆಲ ವ್ಯಕ್ತಿಗಳ ಜೊತೆಗೆ ಮಾತಿಗೆ ಮಾತು ಬೆಳೆದು, ಅದು ವಿಕೋಪಕ್ಕೆ ಹೋಗುವ ಪರಿಸ್ಥಿತಿ ನಿರ್ಮಾಣವಾಯಿತು. ಆಗ ವಾರ್ಡಿನ ಸದಸ್ಯ ಪಾಮೇನಹಳ್ಳಿ ನಾಗರಾಜ ದಿಢೀರನೇ ತೆರವು ಮಾಡಬೇಕೆಂಬುದು ಸಮಂಜಸವಲ್ಲ. ಶೆಡ್ ತೆರವು ಮಾಡಲು ಒಂದು ವಾರದ ಕಾಲಾವಕಾಶ ಕೊಡೋಣ ಎಂಬುದಾಗಿ ಹೇಳಿದರು. ಅಷ್ಟರಲ್ಲಾಗಲೇ ಶೆಡ್ ತೆರವು ವಿಚಾರಕ್ಕೆ ಇಬ್ಬರು ವ್ಯಕ್ತಿಗಳ ಮಧ್ಯೆ ಜೋರಾದ ಗಲಾಟೆ ಶುರುವಾಯಿತು. ಮೇಯರ್ ವೀರೇಶ್ ಮತ್ತು ಸದಸ್ಯ ನಾಗರಾಜ ಸಮಾಧಾನಪಡಿಸಿದರು.

ನನ್ನ 31ನೇ ವಾರ್ಡ್‌ನಲ್ಲಿ ಅದರಲ್ಲೂ ಈ ಭಾಗದಲ್ಲಿ ಯಾವುದೇ ಕಾಮಗಾರಿ ಇಲ್ಲದಂತಾಗಿದೆ. ಯಾವುದೇ ಚರಂಡಿ, ರಸ್ತೆ ಯಾವುದಕ್ಕೂ ಅನುದಾನ ನೀಡಿಲ್ಲ. ಇದೇ ಹಿನ್ನೆಲೆಯಲ್ಲಿ ಮೇಯರ್ ಅವರಿಗೆ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸುವಂತೆ ಮನವಿ ಮಾಡಿದ್ದೆ. ಶಾಸಕರ ಅನುದಾನ, ಪಾಲಿಕೆ ಅನುದಾನ, 15ನೇ ಹಣಕಾಸು ಯೋಜನೆಯೂ ನನ್ನ ವಾರ್ಡ್‌ಗೆ ಮರೀಚಿಕೆಯಾಗಿದೆ. ನಮ್ಮ ವಾರ್ಡ್‌ಗಳ ಅಭಿವೃದ್ಧಿಗೂ ಪಕ್ಷಾತೀತವಾಗಿ ಅನುದಾನ ನೀಡಬೇಕು ಎಂದು ಪಾಲಿಕೆ ಸದಸ್ಯ ಪಾಮೇನಹಳ್ಳಿ ನಾಗರಾಜ್ ಆಗ್ರಹಿಸಿದ್ದಾರೆ.

ಭೇಟಿ ವೇಳೆ ಎಸ್‌ಇ ಉದಯಕುಮಾರ, ಇಂಜಿನಿಯರ್ ಮಧುಸೂದನ್ ಸೇರಿದಂತೆ ಅಧಿಕಾರಿಗಳು, ಸ್ಥಳೀಯರು ಇದ್ದರು.

# ಪ್ಯಾನ್ ಇಂಡಿಯಾ ಜಾಗೃತಿ ಅಭಿಯಾನಕ್ಕೆ ಚಾಲನೆ



ಜಗಳೂರು

ಜಗಳೂರು, ಅ.18- ಸಾರ್ವಜನಿಕರಿಗೆ ಕಾನೂನು ಅರಿವು ಮೂಡಿಸಿ ಮಾಹಿತಿ ಒದಗಿಸುವ ಸದುದ್ದೇಶದಿಂದ ನವೆಂಬರ್ 11 ರವರೆಗೆ ಜಾಗೃತಿ ಅಭಿಯಾನ ಹಮ್ಮಿಕೊಳ್ಳ ಲಾಗಿದೆ ಎಂದು ಸರ್ಕಾರಿ ಸಹಾಯಕ ಅಭಿಯೋಜಕಿ ಎಂ. ರೂಪ ತಿಳಿಸಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಪ್ಯಾನ್ ಇಂಡಿಯಾ ಜಾಗೃತಿ ಅಭಿಯಾನಕ್ಕೆ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿ ನಂತರ ಮಾತನಾಡಿದರು.

ತಾಲ್ಲೂಕಿನಾದ್ಯಂತ ಗ್ರಾಮೀಣ ಭಾಗಗಳಿಗೆ ತೆರಳಿ ಕಾನೂನು ಸೇವಾ ಸಮಿತಿಯ ಪ್ಯಾನಲ್ ವಕೀಲರು ಸರ್ಕಾರದಿಂದ ಸ್ಟೈಫಂಡ್ ಪಡೆಯುವ ನ್ಯಾಯವಾದಿಗಳ ಮೂಲಕ ಉಚ್ಚ ಹಾಗೂ ಸರ್ವೋಚ್ಚ ನ್ಯಾಯಾಲಯಗಳ ಧ್ಯೇಯೋದ್ದೇಶಗಳನ್ನು ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ತಲುಪಿಸಲಾಗುತ್ತಿದೆ. ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಬೇಕೆಂದು ಸಲಹೆ ನೀಡಿದರು.

ವಕೀಲರ ಸಂಘದ ಅಧ್ಯಕ್ಷ ಎಚ್. ಬಸವರಾಜಪ್ಪ , ವಕೀಲರಾದ ವಿ.ತಿಪ್ಪೇಸ್ವಾಮಿ, ಕೆ.ಎಂ. ಬಸವರಾಜಪ್ಪ ,ವೈ. ಹನುಮಂತಪ್ಪ, ಡಿ. ಪ್ರಕಾಶ್, ಬಿ. ಪಂಪಣ್ಣ, ಶ್ರೀನಿವಾಸ್, ಹಾಲಪ್ಪ, ಕರಿಬಸಪ್ಪ, ರುದ್ರೇಶ್ ಇನ್ನಿತರರು ಭಾಗವಹಿಸಿದ್ದರು.

## ನಾಳೆ ಸಾಮೂಹಿಕ ಉಪಾಸನೆ

ದಾವಣಗೆರೆ, ಅ.18- ನಗರದ ಶ್ರೀ ಗಾಯತ್ರಿ ಪರಿವಾರದಿಂದ ಹುಣ್ಣಿಮೆಯಂದು ನಡೆಯುವ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ, ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಶೀಗಿ ಹುಣ್ಣಿಮೆ ಅಂಗವಾಗಿ ನಾಡಿದ್ದು ದಿನಾಂಕ 20 ರ ಬುಧವಾರ ಬೆಳಿಗ್ಗೆ 7 ಗಂಟೆಗೆ ಜಯದೇವ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ನಡೆಯಲಿದೆ ಎಂದು ಪರಿವಾರದ ಡಾ. ಸುಶೀಲಮ್ಮ ತಿಳಿಸಿದ್ದಾರೆ.ಕೆ.ಹೆಚ್. ಮಂಜುನಾಥ್ ಮತ್ತು ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ.

## ರಾಜ್ಯ ಪೊಲೀಸ್ ಮಹಾಸಂಘದ ಶಾಖೆಗಳನ್ನು ಸ್ಥಾಪಿಸಲು ನಗರದಲ್ಲಿ ಸಭೆ



ದಾವಣಗೆರೆ,ಅ.18- ಕರ್ನಾಟಕ ರಾಜ್ಯ ಪೊಲೀಸ್ ಮಹಾಸಂಘದ ಶಾಖೆಗಳನ್ನು ರಾಜ್ಯಾದ್ಯಂತ ಸ್ಥಾಪಿಸುವುದರ ಮೂಲಕ ಸಂಘಟನೆಯನ್ನು ಬಲಪಡಿಸುವ ನಿಟ್ಟಿನಲ್ಲಿ ನಗರದ ಪ್ರವಾಸಿ ಮಂದಿರದಲ್ಲಿ ನಿನ್ನೆ ನಡೆದ ಸಭೆಯಲ್ಲಿ ಚರ್ಚಿಸಲಾಯಿತು.

ಕರ್ನಾಟಕ ರಾಜ್ಯ ಪೊಲೀಸ್ ಮಹಾಸಂಘದ ರಾಜ್ಯಾಧ್ಯಕ್ಷ ಕೆ. ಶಶಿಧರ್, ಬೆಂಗಳೂರು ನಗರಾಧ್ಯಕ್ಷ ಎನ್.ಬಿ. ಕೃಷ್ಣಮೂರ್ತಿ, ಬೆಂಗಳೂರು ಟ್ಯಾಕ್ಸಿ ಮತ್ತು ಲಾರಿ ಚಾಲಕರು - ಮಾಲೀಕರ ಸಂಘದ ಅಧ್ಯಕ್ಷ ಸುರೇಶ್ ಬಾಬು, ಕಾರ್ಮಿಕ ಘಟಕದ ಸಂಚಾಲಕ ಯುಸೂಫ್ ಅವರುಗಳು ಸಂಘಟನೆ ಕುರಿತಂತೆ ಚರ್ಚಿಸಿದರು.

ಕರ್ನಾಟಕ ರಾಜ್ಯ ದಲಿತ ಮಹಾಸಭಾ ಕಾರ್ಯದರ್ಶಿ ಕಣ್ಣಾಳ ಅಂಜಿನಪ್ಪ, ಅಳಗೋಡು ನಿಂಗಪ್ಪ, ಆನಂದ, ಹಾವೇರಿ ಜಿಲ್ಲಾಧ್ಯಕ್ಷ ಹನುಮಂತ ಕಬ್ಬಾರ, ಹರಿಹರ ತಾಲ್ಲೂಕು ಅಧ್ಯಕ್ಷ ಶ್ರೀಕಾಂತ್ ಮತ್ತಿತರರು ಸಭೆಯಲ್ಲಿ ಉಪಸ್ಥಿತರಿದ್ದರು.

## ರಾಣೇಬೆನ್ನೂರು ಜೆಸಿಗೆ ಆಯ್ಕೆ





ರಾಣೇಬೆನ್ನೂರು, ಅ.18- ಇಲ್ಲಿನ ಜೆಸಿ ಸಂಸ್ಥೆಯ ಅಧ್ಯಕ್ಷರಾಗಿ ವೆಂಕಟೇಶ ಕಾಕಿ, ಕಾರ್ಯದರ್ಶಿ ಹರೀಶ ಕೋಪರ್ಡೆ, ಸಹ ಕಾರ್ಯದರ್ಶಿಯಾಗಿ ನಾರಾಯಣ ಬಿಸಲಹಳ್ಳಿ ಆಯ್ಕೆಯಾಗಿದ್ದಾರೆ.


### ಜಮೀನಿನ ಮೂಲ ಕ್ರಯ ಪತ್ರ ಕಳೆದಿರುತ್ತದೆ

ಎ. ರುದ್ರಸ್ವಾಮಿ, ಬಿನ್ ಲೇಟ್ ಎ. ಶಿವಯೋಗಪ್ಪ, ವಯಸ್ಸು ಸುಮಾರು 68 ವರ್ಷ, ವಾಸ : ಡೋರ್. ನಂ. 4091, 8ನೇ ಕ್ರಾಸ್, 11ನೇ ಮೇನ್, ಎಂಸಿಸಿ ಬಿ ಬ್ಲಾಕ್, ದಾವಣಗೆರೆ, ಈ ವಿಳಾಸದಲ್ಲಿ ವಾಸವಾಗಿರುವ ನಾನು ಹಾಗೂ ನನ್ನ ತಾಯಿಯಾದ ಪಾರ್ವತಮ್ಮ ಮತ್ತು ಸಹೋದರಿಯಾದ ವಿಜಯಲಕ್ಷ್ಮಿ ಜಂಟಿ ಹೆಸರಿನಲ್ಲಿ ದಾವಣಗೆರೆ ತಾಲ್ಲೂಕು ಕೈದಾಳೆ ಗ್ರಾಮದ ಸರ್ವೆ ನಂ. 16/2ರಲ್ಲಿ 3 ಎಕರೆ 13 ಗುಂಟೆ ಜಮೀನು ಇದ್ದು, ಸದರಿ ಜಮೀನಿನ ದಾವಣಗೆರೆ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಾಯಿಸಲ್ಪಟ್ಟ ಕ್ರಯ ಪತ್ರವನ್ನು 1ನೇ ಪುಸ್ತಕದ 1169ನೇ ಸಂಪುಟ, 52-54ನೇ ಪುಟದಲ್ಲಿ 1970-71ನೇ ಇಸವಿಯಲ್ಲಿ 5308 ಮತ್ತು 5307ನೇ ನಂಬರಾಗಿ ರಿಜಿಸ್ಟರ್ ಮಾಡಲ್ಪಟ್ಟ ಎರಡು ಕ್ರಯ ಪತ್ರಗಳು ದಿನಾಂಕ : 05.09.2021ರಂದು ಮನೆ ಸ್ವಚ್ಛಗೊಳಿಸುವಾಗ ಕಳೆದು ಹೋಗಿರುತ್ತವೆ. ಸಿಕ್ಕವರು ಈ ಕೆಳಗಿನ ಫೋನಿಗೆ ತಿಳಿಸಲು ಕೋರಿದೆ.

99864 64661



ನಾಡಿನ ಸಮಸ್ತ ನಾಗರಿಕರಿಗೆ ಈದ್ ಮಿಲಾದ್ ಮತ್ತು ಶ್ರೀ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವದ ಶುಭಾಶಯಗಳು.



ಬಿ. ವೀರಣ್ಣ
ನಗರಸಭೆ ಮಾಜಿ ಅಧ್ಯಕ್ಷರು, ಅಧ್ಯಕ್ಷರು, ಜಿಲ್ಲಾ ವಾಲ್ಮೀಕಿ ನಾಯಕ ಸಮಾಜ

ಶ್ರೀಮತಿ ಲಕ್ಷ್ಮಿದೇವಿ ವೀರಣ್ಣ
ಮಹಾನಗರ ಪಾಲಿಕೆ ಮಾಜಿ ಸದಸ್ಯರು ದಾವಣಗೆರೆ.



ನಾಡಿನ ಸಮಸ್ತ ನಾಗರಿಕರಿಗೆ ಈದ್ ಮಿಲಾದ್ ಮತ್ತು ಶ್ರೀ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವದ ಶುಭಾಶಯಗಳು

ಮಹಮದ್ (ಸಲ್ಲಾ ಅಲ್ಲೈ ವಾಸಲ್ಲಂ) ಪೈಗಂಬರ್ ಅವರ ಜನ್ಮ ದಿನಾಚರಣೆ ಆಚರಿಸುತ್ತಿರುವ ಸಮಸ್ತ ಮುಸ್ಲಿಂ ಬಾಂಧವರಿಗೆ ಹಾರ್ದಿಕ ಶುಭಾಶಯಗಳು.



ಈದ್-ಮಿಲಾದ್ ಹಬ್ಬವು ಸರ್ವರಿಗೂ ಸುಖ, ಶಾಂತಿ, ನೆಮ್ಮದಿ ನೀಡಲೆಂದು ಹಾರೈಸುವ,

ಎಂ.ಆರ್. ಸಾಧಿಕ್
ಮಾಜಿ ಅಧ್ಯಕ್ಷರು,
ದಾವಣಗೆರೆ ಮಂಡಕ್ಕಿ ಉತ್ಪಾದಕರ ಕ್ಷೇಮಾಭಿವೃದ್ಧಿ ಸಂಘ, ದಾವಣಗೆರೆ.



ಸ್ವಯಂ ಉದ್ಯೋಗಾಕಾಂಕ್ಷಿ ಯುವಕ-ಯುವತಿಯರಿಗಾಗಿ


### ನ್ಯೂರೋಥೆರಪಿ ಚಿಕಿತ್ಸಾ ಉಚಿತ ಕಾರ್ಯಾಗಾರ

ದಿನಾಂಕ : 24.10.2021 ರಿಂದ 31.10.2021ರವರೆಗೆ.
ಸಮಯ : ಬೆಳಿಗ್ಗೆ 10 ರಿಂದ 2 ಗಂಟೆವರೆಗೆ.
ವಿದ್ಯಾರ್ಹತೆ : ಕನಿಷ್ಟ ಪಿಯುಸಿ/ಯಾವುದೇ ಡಿಗ್ರಿ

ಕಾರ್ಯಾಗಾರದ ಲಾಭಗಳು

- ನಾಡಿನ ಯಾವುದೇ ನಗರ, ಪಟ್ಟಣ, ಹಳ್ಳಿಗಳಲ್ಲಿ ಸ್ವಂತ ಉದ್ಯೋಗ ಪ್ರಾರಂಭಿಸಬಹುದು.
- ಫುಲ್‌ಟೈಮ್/ಪಾರ್ಟ್‌ಟೈಂ ಕೆಲಸ ಮಾಡಬಹುದು.
- ತಿಂಗಳಿಗೆ ಕನಿಷ್ಟ 25 ಸಾವಿರದಿಂದ 30 ಸಾವಿರ ಸಂಪಾದನೆ
- ನಮ್ಮ ಸಂಸ್ಥೆಯಲ್ಲಿ ಸ್ವಯಂ ಸೇವಕರಾಗಬಹುದು.

ಸೂಚನೆ : ಆಸಕ್ತರು ತಮ್ಮ ಬಯೋಡೇಟಾ/ ಫೋಟೋ ಸಹಿತ ಅರ್ಜಿ ಸಲ್ಲಿಸಿ, ಹೆಸರು ನೋಂದಾಯಿಸಿ. 99726 00713 ಈ ನಂಬರ್‌ಗೆ ವಾಟ್ಸಪ್ ಕಳುಹಿಸಿ.



ಸ್ಥಳ : ನ್ಯೂರೋಥೆರಫಿ ವೆಲ್‌ನೆಸ್ ಸೆಂಟರ್
3ನೇ ಮೇನ್, 2ನೇ ಕ್ರಾಸ್, ಎಂಸಿಸಿ ಬಿ ಬ್ಲಾಕ್,ಸುರಭಿ ಆಸ್ಪತ್ರೆ ಹತ್ತಿರ, ದಾವಣಗೆರೆ.
ಮೊ : 99726 00713, 94827 31081



### ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಪ್ರಧಾನ ಕಚೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ.ರಸ್ತೆ, ದಾವಣಗೆರೆ - 577002.

ಬ್ಯಾಂಕಿನ ಷೇರುದಾರರ ಗಮನಕ್ಕೆ

ಮಾನ್ಯ ಸದಸ್ಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಕೋವಿಡ್-19 ಸಾಂಕ್ರಾಮಿಕ ರೋಗದ ಪ್ರಯುಕ್ತ ಸಹಕಾರ ಬ್ಯಾಂಕುಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ವಿಡಿಯೋ ಕಾನ್ಫರೆನ್ಸ್/ವರ್ಚ್ಯುವಲ್ ಮೀಟಿಂಗ್ ಮುಖಾಂತರ ಜರುಗಿಸುವಂತೆ ಸರ್ಕಾರವು ಮಾರ್ಗಸೂಚಿಯನ್ನು ನೀಡಿರುತ್ತದೆ. ಈ ಮಾರ್ಗಸೂಚಿಯನ್ವಯ **ಬ್ಯಾಂಕಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ 23.10.2021ರ ಶನಿವಾರದಂದು ಬೆಳಿಗ್ಗೆ 11.30 ಗಂಟೆಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸಲು ತೀರ್ಮಾನಿಸಲಾಗಿದೆ.** ಆದ್ದರಿಂದ ಮಾನ್ಯ ಸದಸ್ಯರು ವಾರ್ಷಿಕ ಮಹಾಸಭೆಯ ವರ್ಚ್ಯುವಲ್ ಮೀಟಿಂಗ್‌ನಲ್ಲಿ ವಿಡಿಯೋ ಕಾನ್ಫರೆನ್ಸ್/ವೆಬ್‌ಕಾಸ್ಟ್ ಮೂಲಕ ಪಾಲ್ಗೊಳ್ಳುವುದು ಸಾಮಾನ್ಯ ಸಭೆಯ ಹಾಜರಾತಿಯೆಂದು ಪರಿಗಣಿಸಲ್ಪಡುವುದರಿಂದ **ತಮ್ಮ ಸದಸ್ಯತ್ವ ಖಾತೆ ನಂಬರ್ ಹಾಗೂ ಮೊಬೈಲ್ ಸಂಖ್ಯೆಯನ್ನು ಕೂಡಲೇ ನಮ್ಮ ಬ್ಯಾಂಕಿನ ಶಾಖೆಗಳಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಮಾನ್ಯ ಸದಸ್ಯರು ತಮ್ಮ ಹಾಜರಾತಿಗಾಗಿ ಹಾಗೂ ವಾರ್ಷಿಕ ವರದಿಯನ್ನು ಡೌನ್‌ಲೋಡ್ ಮಾಡಿಕೊಳ್ಳಲು ಈ ಕೆಳಗೆ ಕೊಟ್ಟಿರುವ ಲಿಂಕನ್ನು ಬಳಸಿಕೊಳ್ಳಲು ಕೋರಿದೆ.**

ಮಹಾಸಭೆಯ ಹಾಜರಾತಿಗಾಗಿ ಲಿಂಕ್ ಹಾಗೂ ಕ್ಯೂ.ಆರ್. ಕೋಡ್
https://seeall.live/ducb

ವಾರ್ಷಿಕ ವರದಿ ಡೌನ್‌ಲೋಡ್ ಮಾಡಿಕೊಳ್ಳಲು ಕ್ಯೂ.ಆರ್. ಕೋಡ್

ಕೋಗುಂಡಿ ಬಕ್ಕೇಶಪ್ಪ — ಅಧ್ಯಕ್ಷರು
ಅಂದನೂರು ಮುಪ್ಪಣ್ಣ — ಉಪಾಧ್ಯಕ್ಷರು
ಡಿ.ವಿ. ಆರಾಧ್ಯಮಠ್ — ಪ್ರಧಾನ ವ್ಯವಸ್ಥಾಪಕರು



ರಿ.ನಂ.:596/2010-11

### ಜಂಗಮ ಸೌಹಾರ್ದ ಸಹಕಾರಿ ನಿಯಮಿತ

# 477/2, ಪ್ರಿಯ ಕಾಂಪ್ಲೆಕ್ಸ್, 16ನೇ ಕ್ರಾಸ್, ಕೆ.ಟಿ.ಜೆ. ನಗರ, ಹದಡಿ ರಸ್ತೆ, ದಾವಣಗೆರೆ. ಫೋ. : 08192-233666

2020-21ನೇ ಸಾಲಿನ ವಾರ್ಷಿಕ ಮಹಾಸಭೆ ಆಹ್ವಾನ ಪತ್ರಿಕೆ

ಮಾನ್ಯ ಸಹಕಾರಿ ಸದಸ್ಯರೇ,

ನಮ್ಮ ಸಹಕಾರಿಯ 2020-21ನೇ ಸಾಲಿನ 11ನೇ ವಾರ್ಷಿಕ ಮಹಾಸಭೆಯನ್ನು ಹಾಗೂ ನಮ್ಮ ಸಹಕಾರಿಯ 'ದಶಮಾನೋತ್ಸವ' ಸಂಭ್ರಮವನ್ನು **ದಿನಾಂಕ 30.10.2021ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಶ್ರೀ ಷ॥ಬ್ರ॥ಡಾ॥ ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮೀಜಿ ಹಿರೇಮಠ (ಶಿವಾಚಾರ್ಯ ನಿಕೇತನ)** ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ ಇಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎನ್.ಎಂ. ಬಸವರಾಜಯ್ಯ ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ.

ಕಾರ್ಯಕಾರಿ ಮಂಡಳಿಯ ಆದೇಶದ ಮೇರೆಗೆ
**ಶ್ರೀಮತಿ ಕವಿತಾ ಜೆ.** ಕಾರ್ಯದರ್ಶಿ

ವಿಶೇಷ ಸೂಚನೆ: 1) ಈಗಾಗಲೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಗಳನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು, ತಲುಪದೇ ಇದ್ದ ಸದಸ್ಯರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಮಹಾಸಭೆಗೆ ಆಗಮಿಸಬೇಕಾಗಿ ವಿನಂತಿ.
2) ಮಹಾಸಭೆಯಲ್ಲಿ ಮಾಸ್ಕ್ ಧರಿಸಿ, ಸ್ಯಾನಿಟೈಸರ್ ಬಳಸಿ, ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕಾಗಿ ವಿನಂತಿ.



### ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ಸಿ.ಜೆ.ಎಂ. ದಾವಣಗೆರೆ

ಸಿ.ಆರ್. ಮಿಸ್ ಸಂಖ್ಯೆ : 91/2021

**ಅರ್ಜಿದಾರರು : ಶ್ರೀಮತಿ ರೇಣುಕಮ್ಮ** ಕೋಂ. ಲೇಟ್ ರಮೇಶ್, ವಯಸ್ಸು 41 ವರ್ಷ, ವಾಸ : ಗೊಲ್ಲರಹಳ್ಳಿ ಗ್ರಾಮ, ದಾವಣಗೆರೆ ತಾಲ್ಲೂಕು. **-ವಿರುದ್ಧ- ಎದುರುದಾರರು : 1) ತಹಶೀಲ್ದಾರರು,** ಜನನ ಮತ್ತು ಮರಣ ನೋಂದಣಾಧಿಕಾರಿಗಳು, ದಾವಣಗೆರೆ ವಿಭಾಗ, ದಾವಣಗೆರೆ. **2) ಶ್ರೀಮತಿ ಯಲ್ಲಮ್ಮ** ಕೋಂ. ವೆಂಕಟೇಶಪ್ಪ, ವಯಸ್ಸು 60 ವರ್ಷ, **3) ಶ್ರೀಮತಿ ತಿಮ್ಮಕ್ಕ** ಕೋಂ. ಮೂರ್ತಪ್ಪ, ವಯಸ್ಸು 50 ವರ್ಷ, ಇಬ್ಬರ ವಾಸ : ಗೊಲ್ಲರಹಳ್ಳಿ ಗ್ರಾಮ, ದಾವಣಗೆರೆ ತಾಲ್ಲೂಕು.

ಅರ್ಜಿದಾರರ ಪರ ನೀಡಲಾದ ಪತ್ರಿಕಾ ಪ್ರಕಟಣಾ ನೋಟಿಸ್

ಅರ್ಜಿದಾರರ ಅಜ್ಜಿಯಾದ ಶ್ರೀಮತಿ ವೆಂಕಟಮ್ಮ ಕೋಂ. ಹೊಸೂರಪ್ಪ ಇವರು ದಿನಾಂಕ 08.08.2009ರಂದು ಗೊಲ್ಲರಹಳ್ಳಿ ಗ್ರಾಮ, ದಾವಣಗೆರೆ ತಾಲ್ಲೂಕು ಈ ವಿಳಾಸದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಅರ್ಜಿದಾರರು ಮೇಲ್ಕಂಡ ಪ್ರಕರಣವನ್ನು ತಮ್ಮ ಮಗನ ಮರಣ ಪ್ರಮಾಣ ಪತ್ರವನ್ನು ಪಡೆಯಲು ಮಾನ್ಯ ಘನ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಬೇರೆ ಯಾರಾದರೂ ತಕರಾರು ಇದ್ದಲ್ಲಿ ನಿಮ್ಮ ಹಾಜರಾತಿಗಾಗಿ ದಿನಾಂಕ 28.10.2021ರಂದು ಬೆಳಿಗ್ಗೆ 11.00 ಗಂಟೆಗೆ ತಾವುಗಳು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ಆಕ್ಷೇಪಣೆ ಅಥವಾ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ನಿರ್ಲಕ್ಷಿಸಿದಲ್ಲಿ ತಮ್ಮ ಗೈರು ಹಾಜರಿಯಲ್ಲಿ ನ್ಯಾಯಾಲಯವು ಮುಂದಿನ ಆದೇಶ ಹೊರಡಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ದಿನಾಂಕ 08ನೇ ಅಕ್ಟೋಬರ್ 2021ರಂದು ಹೊರಡಿಸಲ್ಪಟ್ಟಿದೆ.

ಅರ್ಜಿದಾರರು ಪರ ವಕೀಲರು
(ಬಿ.ಜೆ. ಪ್ರಭು)

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ಸಿ.ಜೆ.ಎಂ. ದಾವಣಗೆರೆ.

## ನಗರದ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಸೀಗೆ ಹುಣ್ಣಿಮೆ



ದಾವಣಗೆರೆ, ಅ.18 - ನಗರದ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 20ರ ಮಂಗಳವಾರ ಸೀಗೆ ಹುಣ್ಣಿಮೆ ಪ್ರಯುಕ್ತ ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗಲಿವೆ.

ಹೋಮ - ಹವನ, ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ, ಕಥೆ, ಪಲ್ಲಕ್ಕಿ ಉತ್ಸವ, ದೇವಿಗೆ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಈ ಸೇವಾ ಕಾರ್ಯಕ್ರಮಕ್ಕೆ ಶ್ರೀಮತಿ ರಾಮಲಕ್ಷ್ಮಿ ಮತ್ತು ಶ್ರೀ ಆಂಜನೇಯಲು ಮತ್ತು ಮಕ್ಕಳು ಸೇವಾಕರ್ತರಾಗಿದ್ದಾರೆ.

## ತುಳಜಾ ಭವಾನಿ ದೇವಸ್ಥಾನದಲ್ಲಿ ನಾಳೆ ಸತ್ಯನಾರಾಯಣ ಸ್ವಾಮಿ ಪೂಜೆ



ದಾವಣಗೆರೆ,ಅ.18- ನಗರದ ವಿದ್ಯಾರ್ಥಿ ಭವನದ ಬಳಿಯ ಕೆಟಿಜೆ ನಗರದಲ್ಲಿರುವ ಶ್ರೀ ತುಳಜಾ ಭವಾನಿ ದೇವಸ್ಥಾನದಲ್ಲಿ ಸೀಗೆ ಹುಣ್ಣಿಮೆ ಪ್ರಯುಕ್ತ ನಾಡಿದ್ದು ದಿನಾಂಕ 20ರ ಮಂಗಳವಾರ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ ನಡೆಯಲಿದೆ.

ಪ್ರತಿ ಮಾಹೆ ಹುಣ್ಣಿಮೆ ಸಂದರ್ಭದಲ್ಲಿ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ ನಡೆಸಲಾಗುವುದು. ಸಂಕಲ್ಪ ಪೂಜೆ ಮಾಡಿ ಸಲಿಚ್ಚಿಸುವ ಭಕ್ತಾದಿಗಳು ದೇವಸ್ಥಾನದಲ್ಲಿ ಅರ್ಚಕರನ್ನು ಸಂಪರ್ಕಿಸಬಹುದು.

### ರೈತರ ಹತ್ಯೆ ಖಂಡಿಸಿ ಪ್ರತಿಭಟನೆ : ಪ್ರಧಾನಿ ಭಾವಚಿತ್ರ ಪ್ರದರ್ಶನಕ್ಕೆ ನಿರಾಕರಣೆ - ಖಂಡನೆ

# ಪ್ರತಿಭಟನಾಕಾರರು - ಪೊಲೀಸರ ಮಧ್ಯೆ ತಳ್ಳಾಟ, ನೂಕಾಟ

ದಾವಣಗೆರೆ, ಅ.18- ಉತ್ತರ ಪ್ರದೇಶದ ಲಖೀಂಪುರ ಖೇರಿಯಲ್ಲಿ ಪ್ರತಿಭಟನಾ ನಿರತ ರೈತರ ಹತ್ಯೆ ಖಂಡಿಸಿ ನಗರದಲ್ಲಿ ಇಂದು ಪ್ರತಿಭಟಿಸುತ್ತಿದ್ದ ವೇಳೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರುಗಳ ಭಾವಚಿತ್ರಗಳ ಪ್ರದರ್ಶನಕ್ಕೆ ಅವಕಾಶ ನೀಡುವ ವಿಚಾರವಾಗಿ ಸಂಯುಕ್ತ ಹೋರಾಟ ಕರ್ನಾಟಕ ಸಮಿತಿಯ ಮುಖಂಡರು ಮತ್ತು ಪೊಲೀಸರ ಮಧ್ಯೆ ಪರಸ್ಪರ ತಳ್ಳಾಟ, ನೂಕಾಟದ ಜೊತೆಗೆ ವಾಗ್ವಾದ ನಡೆಯಿತು.

ಜಯದೇವ ವೃತ್ತದಿಂದ ಗಾಂಧಿ ವೃತ್ತದತ್ತ ಪ್ರತಿಭಟನಾಕಾರರು ಪ್ರಧಾನಿ ಮೋದಿ ಹಾಗೂ ಸಚಿವ ಅಮಿತ್ ಶಾ ಭಾವಚಿತ್ರ ವಿರೂಪಗೊಳಿಸಿ, ಮೆರವಣಿಗೆ ನಡೆಸಲು ಮುಂದಾಗಿದ್ದರು.

ಒಂದು ಕಡೆ ಪ್ರತಿಭಟನಾಕಾರರು ಮೋದಿ ಮತ್ತು ಅಮಿತ್ ಷಾ ಅವರ ಫೋಟೋ ಹಿಡಿದು ಮೆರವಣಿಗೆ ಹೋಗುತ್ತೇವೆ ಎಂದು ಹಠ ಹಿಡಿದರೆ, ಇತ್ತ ಪೊಲೀಸ್ ವೃತ್ತ ನಿರೀಕ್ಷಕ ಸುರೇಶ್ ಸಗರಿ ಅವರು ಮೆರವಣಿಗೆಗೆ ಮಾತ್ರ ಅವಕಾಶವಿದೆ. ಭಾವಚಿತ್ರಗಳ ಪ್ರದರ್ಶನಕ್ಕೆ ಅವಕಾಶ ನೀಡುವುದಿಲ್ಲ ಎಂದು ನಿರಾಕರಿಸಿದರು.

ಇದರಿಂದ ತಾಳ್ಮೆ ಕಳೆದುಕೊಂಡ ಪ್ರತಿಭಟನಾಕಾರರು, ಧರಣಿ ಕುಳಿತರು. ಪ್ರತಿಭಟನೆಯ ನೇತೃತ್ವ ವಹಿಸಿದ್ದ ಆವರಗೆರೆ ಉಮೇಶ್, ಆವರಗೆರೆ ಚಂದ್ರು, ಡಾ. ಸುನಿತ್‌ಕುಮಾರ್, ಮಂಜುನಾಥ ಕುಕ್ಕುವಾಡ ಅವರನ್ನು ಎತ್ತಿ, ಪೊಲೀಸರ ಜೀಪಿಗೆ ಹಾಕಲು ಮುಂದಾದರು. ಈ ವೇಳೆ ಪೊಲೀಸರು ಮತ್ತು ಪ್ರತಿಭಟನಾಕಾರರ ಮಧ್ಯೆ ತಳ್ಳಾಟ, ನೂಕಾಟ ನಡೆಯಿತು.



ಪ್ರತಿಭಟನೆ ನೇತೃತ್ವ ವಹಿಸಿದ್ದ ಸಂಘಟನೆ ಜಿಲ್ಲಾ ಸಂಚಾಲಕ ಹೆಚ್.ಜಿ. ಉಮೇಶ್ ಮಾತನಾಡಿ, ಬಿಜೆಪಿಯವರು ಬೈಕ್ ರ್‍ಯಾಲಿ ನಡೆಸಲು, ಮೆರವಣಿಗೆ ನಡೆಸಲು, ಸಭೆ-ಸಮಾರಂಭ ಮಾಡಲು ಅವಕಾಶ ನೀಡುತ್ತೀರಿ. ನಮಗೇಕೆ ಭಾವಚಿತ್ರ ಪ್ರದರ್ಶನಕ್ಕೆ ಅವಕಾಶ ನೀಡುವುದಿಲ್ಲ. ನಮಗೆ ಭಾವಚಿತ್ರ ಪ್ರದರ್ಶನಕ್ಕೆ ಅವಕಾಶ ನೀಡಲೇಬೇಕು ಎಂದು ಹಠ ಹಿಡಿದರು.

ನೀವು ಖಾಕಿ ಸಮವಸ್ತ್ರ ಬಿಟ್ಟು, ಕೇಸರಿ ಸಮವಸ್ತ್ರ ಹಾಕಿಕೊಳ್ಳಿ, ಸರ್ಕಾರ ಪೊಲೀಸ್ ಯಂತ್ರಾಂಗ ಬಳಸಿಕೊಂಡು ಹೋರಾಟ ಹತ್ತಿಕ್ಕಲು ಪ್ರಯತ್ನಿಸುತ್ತಿದೆ. ಪೊಲೀಸರು ದೌರ್ಜನ್ಯ ನಡೆಸುವುದು ಸರಿಯಲ್ಲ. ಪ್ರತಿಭಟನೆ ನಡೆಸುವುದು ನಮ್ಮ ಸಂವಿಧಾನಬದ್ಧ ಹಕ್ಕು. ಇದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸಿಪಿಐ ಗುರುಬಸವರಾಜ್, ಟ್ರಾಫಿಕ್ ಪಿಐ ತಿಮ್ಮಣ್ಣ ಅವರುಗಳು ಪ್ರಧಾನಿ ಭಾವಚಿತ್ರ ಪ್ರದರ್ಶನಕ್ಕೆ ಮತ್ತು ದಹನಕ್ಕೆ ಅವಕಾಶವಿಲ್ಲ. ಮೆರವಣಿಗೆ ಬೇಕಾದರೆ ಮಾಡಿಕೊಳ್ಳಿ ಎಂದು ಪ್ರತಿಭಟನಾ ನಿರತರ ಮನವೊಲಿಸಲು ಯತ್ನಿಸಿದರು.

ಆಗ ಪ್ರತಿಭಟನಾಕಾರರು ತಮ್ಮ ಕೈಗಳಲ್ಲಿದ್ದ ಭಾವಚಿತ್ರಗಳನ್ನು ಪೊಲೀಸರಿಗೆ ಹಸ್ತಾಂತರಿಸಿ, ಕೊನೆಗೆ ಜಯದೇವ ವೃತ್ತದಿಂದ ಗಾಂಧಿ ವೃತ್ತದವರೆಗೆ ಮೆರವಣಿಗೆ ನಡೆಸಿ, ಮೋದಿ, ಅಮಿತ್ ಶಾ ಮತ್ತು ಕೇಂದ್ರ ಗೃಹ ಇಲಾಖೆಯ ರಾಜ್ಯ ಖಾತೆ ಸಚಿವ ಅಜಯ್ ಮಿಶ್ರಾ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಆವರಗೆರೆ ಉಮೇಶ್, ಆವರಗೆರೆ ಚಂದ್ರು, ಡಾ. ಸುನಿತ್ ಕುಮಾರ್, ಮಂಜುನಾಥ ಕುಕ್ಕುವಾಡ, ಐರಣಿ ಚಂದ್ರು, ಭಾರತಿ, ಮಧು ತೊಗಲೇರಿ, ಪರಶುರಾಮ್, ರಂಗನಾಥ್, ಆದಿಲ್‌ಖಾನ್ ಸೇರಿದಂತೆ, ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಮೆಕ್ಕೆಜೋಳಕ್ಕೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಲು ಆಗ್ರಹ

### ಜಗಳೂರಿನಲ್ಲಿ ರೈತರ ಪ್ರತಿಭಟನೆ



ಜಗಳೂರು, ಅ.18- ಮೆಕ್ಕೆಜೋಳ ಒಂದು ಕ್ವಿಂಟಾಲ್‌ಗೆ ಕನಿಷ್ಠ 3500 ರೂ. ಬೆಂಬಲ ಬೆಲೆ ನಿಗದಿಗೆ ಒತ್ತಾಯಿಸಿ, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಹುಚ್ಚವ್ವನಹಳ್ಳಿ ಮಂಜುನಾಥ್ ಬಣದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಪ್ರತಿಭಟನಾಕಾರರು, ಮಹಾತ್ಮ ಗಾಂಧಿ ವೃತ್ತದಿಂದ ಅಂಬೇಡ್ಕರ್ ವೃತ್ತದ ಮೂಲಕ ಆಡಳಿತ ಸರ್ಕಾರಗಳ ವಿರುದ್ಧ ಘೋಷಣೆ ಕೂಗುತ್ತಾ, ತಹಶೀಲ್ದಾರ್ ಕಛೇರಿ ಮುಂಭಾಗ ಜಮಾಯಿಸಿ, ನಂತರ ಲಿಖಿತ ಮನವಿ ಸಲ್ಲಿಸಿದರು.

ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿ.ಎಂ. ಹೊಳೆ ಚಿರಂಜೀವಿ ಮಾತನಾಡಿ, ಕೇಂದ್ರ ಸರ್ಕಾರ ಕ್ವಿಂಟಾಲ್ ಒಂದಕ್ಕೆ 1860 ರೂ. ಗಳನ್ನು ಘೋಷಣೆ ಮಾಡಿದ್ದರೂ ಖರೀದಿ ಕೇಂದ್ರದಲ್ಲಿ ಖರೀದಿದಾರರು1200 ರೂ. ನಿಂದ 1400 ರೂ. ವರೆಗೆ ಮಾತ್ರ ಖರೀದಿಸುತ್ತಿದ್ದಾರೆ.

ಕೃಷಿ ಚಟುವಟಿಕೆ, ಕೂಲಿ ವೆಚ್ಚ, ಗೊಬ್ಬರ, ಬಿತ್ತನೆ ಬೀಜ, ಔಷಧಿ ಬೆಲೆಗಳ ವೆಚ್ಚ ಅಧಿಕವಾಗಿದ್ದು, ರೈತರಿಗೆ ಲಾಭಕ್ಕಿಂತ ನಷ್ಟವೇ ಹೆಚ್ಚಾಗುತ್ತಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕನಿಷ್ಠ ಬೆಂಬಲ ಬೆಲೆ ಕಾಯ್ದೆ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಕಳೆದ 10 ತಿಂಗಳಿಂದ ರೈತರ ಹೋರಾಟ ತೀವ್ರ ಸ್ವರೂಪ ಪಡೆಯುತ್ತಿದ್ದು, ಸುಮಾರು 600 ಕ್ಕೂ ಅಧಿಕ ಹೋರಾಟ ನಿರತ ರೈತರು ಹುತಾತ್ಮರಾಗಿದ್ದರೂ ಸರ್ಕಾರ ಕನಿಷ್ಠ ಬೆಂಬಲ ಬೆಲೆ ಕಾಯ್ದೆ ಜಾರಿಗೊಳಿಸಿಲ್ಲ. ದೇಶದಲ್ಲಿ ಮೆಕ್ಕೆಜೋಳ ಬೆಲೆ ಏಕರೂಪವಾಗಿದ್ದು, ಖರೀದಿದಾರರು ಬೇಕಾಬಿಟ್ಟಿ ದರದಲ್ಲಿ ಖರೀದಿಸಿ, ಬಿಹಾರದಿಂದ ಕರ್ನಾಟಕ್ಕೆ ಆಮದು ಮಾಡಿ, ಇಲ್ಲಿ ವ್ಯಾಪಾರ ನಡೆಸುತ್ತಾರೆ. ಇದನ್ನು ಗಂಭೀರವಾಗಿ ಪರಿಗಣಿಸಿ, ತಪ್ಪಿತಸ್ಥರಿಗೆ ಸರ್ಕಾರ ಕಾನೂನು ಶಿಕ್ಷೆ ಒದಗಿಸಬೇಕು. ಇಲ್ಲವಾದರೆ ಉಗ್ರಸ್ವರೂಪದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಸಂಘಟನೆಯ ಗೌರವಾಧ್ಯಕ್ಷ ಗಂಗಾಧರಪ್ಪ, ಪದಾಧಿಕಾರಿಗಳಾದ ರಾಜು, ಲೋಕೇಶ್, ಸತೀಶ್, ಶರಣಪ್ಪ, ಪ್ರಹ್ಲಾದಪ್ಪ, ರಂಗಪ್ಪ, ಅಂಜಿನಪ್ಪ, ಸಿ. ಬಸವರಾಜ್, ಈರಪ್ಪ, ತಿಪ್ಪೇಸ್ವಾಮಿ ಹಾಗು ಇನ್ನಿತರರು ಭಾಗವಹಿಸಿದ್ದರು.

## ನಗರದಲ್ಲಿ ಇಂದು ಆಯುಷ್ಮಾನ್ ಭಾರತ್ ಕಾರ್ಡ್ ವಿತರಣೆ

ನಗರ ಪಾಲಿಕೆಯ 15ನೇ ವಾರ್ಡಿನ ವಿನೋಬನಗರದ 4ನೇ ಮೇನ್, 3ನೇ ಕ್ರಾಸ್ ಯಲ್ಲಮ್ಮದೇವಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂದು ಬೆಳಗ್ಗೆ 8.30 ರಿಂದ ಸಂಜೆ 6.30 ರವರೆಗೆ ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಯೋಜನೆಯಡಿ ಮೊದಲನೇ ಬಾರಿಗೆ ಬಿ.ಪಿ.ಎಲ್ ಮತ್ತು ಎ.ಪಿ.ಎಲ್ ಕಾರ್ಡ್ ಬಳಕೆದಾರರಿಗೆ ಆಯುಷ್ಮಾನ್ ಭಾರತ್ ಕಾರ್ಡನ್ನು ಮಾಡಿಕೊಡಲಾಗುತ್ತದೆ ಎಂದು ಮಹಾನಗರ ಪಾಲಿಕೆ ಸದಸ್ಯೆ ಶ್ರೀಮತಿ ಆಶಾ ಉಮೇಶ್ ತಿಳಿಸಿದ್ದಾರೆ.




## ಅಕ್ಟೋಬರ್‌ನಲ್ಲಿ ರಫ್ತು ಶೇ.40.5ರಷ್ಟು ಹೆಚ್ಚಳ

ನವದೆಹಲಿ, ಅ. 18 – ಪ್ರಸಕ್ತ ತಿಂಗಳ ಮೊದಲ ಹದಿನಾಲ್ಕು ದಿನಗಳಲ್ಲಿ ದೇಶದ ರಫ್ತು ಶೇ.40.5ರಷ್ಟು ಹೆಚ್ಚಾಗಿ 15.13 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಪೆಟ್ರೋಲಿಯಂ ಉತ್ಪನ್ನ, ಇಂಜಿನಿಯರಿಂಗ್ ಹಾಗೂ ರಸಾಯನಿಕ ಉತ್ಪನ್ನಗಳ ರಫ್ತು ಹೆಚ್ಚಾಗಿರುವುದು ಇದಕ್ಕೆ ಕಾರಣ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.

ಇದೇ ಅವಧಿಯಲ್ಲಿ ಆಮದು ಶೇ.60.72ರಷ್ಟು ಹೆಚ್ಚಾಗಿ 14.82 ಶತಕೋಟಿ ಡಾಲರ್‌ಗಳಿಗೆ ತಲುಪಿದೆ.

ಸೆಪ್ಟೆಂಬರ್ ತಿಂಗಳಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ರಫ್ತು ಶೇ.22.63ರಷ್ಟು ಹೆಚ್ಚಾಗಿ 33.79 ಶತಕೋಟಿ ಡಾಲರ್‌ಗಳಿಗೆ ತಲುಪಿತ್ತು. ಇದೇ ವೇಳೆ ವಿನಿಮಯ ಕೊರತೆ ದಾಖಲೆಯ 22.59 ಶತಕೋಟಿ ಡಾಲರ್‌ಗಳಿಗೆ ತಲುಪಿದೆ.

## ಉಸ್ತುವಾರಿ ಸಚಿವರ ಪ್ರವಾಸ ರದ್ದು

ಹೊನ್ನಾಳಿ ತಾಲ್ಲೂಕಿನ ನ್ಯಾಮತಿ ಪಟ್ಟಣದಲ್ಲಿ ಇಂದು ಏರ್ಪಾಡಾಗಿರುವ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಬೇಕಿದ್ದ ನಗರಾಭಿವೃದ್ಧಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ ಅವರ ಪ್ರವಾಸ ರದ್ದಾಗಿದೆ.

## ಬ್ಯಾಂಕಿನ ಗ್ರಾಹಕ ಸೇವಾ ಪಾಯಿಂಟ್ ಏಜೆನ್ಸಿ ಕೊಡುವ ನೆಪದಲ್ಲಿ ವಂಚನೆ

ದಾವಣಗೆರೆ, ಅ.18- ಬ್ಯಾಂಕಿನ ಗ್ರಾಹಕ ಸೇವಾ ಪಾಯಿಂಟ್ ಏಜೆನ್ಸಿ ಕೊಡುವುದಾಗಿ ನಂಬಿಸಿ, 2 ಲಕ್ಷದ 11 ಸಾವಿರದ 500 ರೂ. ಹಣವನ್ನು ಆನ್‌ಲೈನ್ ಮುಖೇನ ವಂಚಿಸಿರುವ ಘಟನೆ ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಚನ್ನಗಿರಿ ತಾಲ್ಲೂಕು ಕಾರಿಗನೂರು ಅಂಚೆ ಅರೇಹಳ್ಳಿ ಗ್ರಾಮದ ಕೆ. ನವೀನ್ ನಾಯ್ಕ ವಂಚನೆಗೊಳಗಾದವರು. ಈತನನ್ನು ದೂರವಾಣಿ ಮುಖಾಂತರ ಸಂಪರ್ಕಿಸಿದ ಅಪರಿಚಿತನು, ತಾನು ಬ್ಯಾಂಕ್ ಗ್ರಾಹಕ ಸೇವಾ ಪಾಯಿಂಟ್ ಏಜೆನ್ಸಿಯವನೆಂದು ಪರಿಚಿತಗೊಂಡು ಈ ಕೃತ್ಯ ನಡೆಸಿದ್ದಾನೆ ಎಂದು ನವೀನ್ ನಾಯ್ಕ ದೂರಿನಲ್ಲಿ ತಿಳಿಸಿದ್ದಾರೆ.

## ನ್ಯಾಮತಿಗೆ ಇಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್ ಅವರು ಇಂದು ಜಿಲ್ಲೆಗೆ ಆಗಮಿಸಲಿದ್ದಾರೆ. ಬೆಳಿಗ್ಗೆ 10 ಕ್ಕೆ ಹೊನ್ನಾಳಿ ತಾಲ್ಲೂ ಕಿನ ನ್ಯಾಮತಿಗೆ ಆಗಮಿಸುವ ಸಚಿವರು, ಹೊನ್ನಾಳಿ ವಿಧಾನಸಭಾ ಕ್ಷೇತ್ರದ ಕೊರೊನಾ ವಾರಿಯರ್ಸ್‌ಗಳಿಗೆ ಆಯೋಜಿಸಿರುವ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸುವರು.




## ಹರಿಹರ ನಗರಸಭೆ ಸದಸ್ಯರಾದ ನೀತಾ ಮೆಹರ್ವಾಡೆ ನಿಧನ



ಹರಿಹರ, ಅ.18- ನಗರಸಭೆಯ 21ನೇ ವಾರ್ಡಿನ ಸದಸ್ಯರಾದ ಶ್ರೀಮತಿ ನೀತಾ ರಮೇಶ್ ಮೆಹರ್ವಾಡೆ (45) ಅವರು ಇಂದು ಮಧ್ಯಾಹ್ನ 12.10ಕ್ಕೆ ನಿಧನರಾದರು. ನೀತಾ ಅವರು ಇಬ್ಬರು ಪುತ್ರರು, ಅತ್ತೆ, ಮಾವ ಅಪಾರ-ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯನ್ನು ನಗರದ ದಾಲ್ಮಿಯಾ ವಿಶ್ರಾಮ್ ಘಾಟ್‌ನಲ್ಲಿ ಸಂಜೆ ನಡೆಯಿತು.

**ಸಂತಾಪ:** ಸಂಸದ ಜಿ.ಎಂ. ಸಿದ್ದೇಶ್ವರ, ಮಾಜಿ ಶಾಸಕ ಬಿ.ಪಿ. ಹರೀಶ್, ಬಿಜೆಪಿ ಜಿಲ್ಲಾ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ನಗರ ಘಟಕ ಅಧ್ಯಕ್ಷ ಅಜಿತ್ ಸಾವಂತ್ ಸೇರಿದಂತೆ ಅನೇಕ ಮುಖಂಡರು ಸಂತಾಪ ಸೂಚಿಸಿದ್ದಾರೆ.

## ಶಾಸಕನ ಮನೆಯಿಂದ 1,440 ಗ್ರಾಂ ಚಿನ್ನ, 24.25 ಲಕ್ಷ ರೂ. ನೆಕ್ಲೇಸ್ ವಶ

ಭುವನೇಶ್ವರ, ಅ. 18 – ಒಡಿಶಾದ ಗೋಪಾಲಪುರದ ಶಾಸಕ ಪ್ರದೀಪ್ ಪಾಣಿಗ್ರಹಿ ಅವರ ಮನೆಯಿಂದ ಭ್ರಷ್ಟಾಚಾರ ವಿರೋಧಿ ದಳದ ಸಿಬ್ಬಂದಿ 1,440 ಗ್ರಾಂಗಳ ಬಂಗಾರ ಹಾಗೂ 24.25 ಲಕ್ಷ ರೂ.ಗಳ ನೆಕ್ಲೇಸ್ ವಶಪಡಿಸಿಕೊಂಡಿದ್ದಾರೆ.

ಪಾಣಿಗ್ರಹಿ, ಅವರ ಸಂಬಂಧಿಗಳು ಹಾಗೂ ಸಹಚರರ ಮನೆಗಳಲ್ಲಿ 23 ಗಂಟೆಗಳ ಕಾಲ ಶೋಧ ನಡೆಸಿದ ನಂತರ 1,440 ಗ್ರಾಂಗಳ ಬಂಗಾರ ಹಾಗೂ 24.25 ಲಕ್ಷ ರೂ. ಮೌಲ್ಯದ ಬ್ರಾಂಡ್ ಡಿಸೈನರ್ ನೆಕ್ಲೇಸ್ ವಶಪಡಿಸಿಕೊಂಡಿರುವುದಾಗಿ ವಿಚಕ್ಷಣ ದಳದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಇವುಗಳನ್ನು ವಶಪಡಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಪಾಣಿಗ್ರಹಿ ಹಾಗೂ ಅವರ ಕುಟುಂಬದವರ ಬ್ಯಾಂಕ್ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಲೂ ಸಹ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ವಶಪಡಿಸಿಕೊಳ್ಳಲಾದ ವಸ್ತುಗಳನ್ನು ವಿಚಕ್ಷಣ ದಳ ಹಾಗೂ ಲೆಕ್ಕ ಪರಿಶೋಧಕರು ಪರಿಶೀಲಿಸುತ್ತಿದ್ದಾರೆ. ಶೋಧ ಸಮಯದಲ್ಲಿ ಪತ್ತೆಯಾದ ಎಲೆಕ್ಟ್ರಾನಿಕ್ ಸಾಕ್ಷಿಗಳು ಹಾಗೂ ದಾಖಲೆಗಳನ್ನೂ ಪರಿಶೀಲಿಸಲಾಗುತ್ತಿದೆ ಎಂದು ವಿಚಕ್ಷಣ ದಳದ ಅಧಿಕಾರಿಗಳು ತಿಳಿಸಿದ್ದಾರೆ.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte